ಬೆಲೆ ರೂ.2.50
D.O.P - 15th of every month at Udupi Sorting Office

ಸ್ಥಾನಿಕ ಬ್ರಾಹ್ಮಣರ ವಿಶ್ವಕೋಶದಲ್ಲಿ ನಿಮ್ಮ ವಿಳಾಸವನ್ನು ನೋಂದಾಯಿಸಿರಿ
ನಿಮ್ಮ ಮೊಬೈಲ್‌ಗೆ
STHANIKA
PLAY STOREನಿಂದ STHANIKA ಆ್ಯಪನ್ನು ವರ್ಗಾಯಿಸಿಕೊಳ್ಳಿ
ಸಮಾಜಬಾಂಧವರೊಡನೆ ಸದಾ ಸಂಪರ್ಕದಲ್ಲಿರಿ

# ಶ್ರೀ ಶಾರದಾ


ಮಾಸಪತ್ರಿಕೆ – 15 ಅಕ್ಟೋಬರ್ 2019

॥ ಧಿಯೋ ಯೋನಃ ಪ್ರಚೋದಯಾತ್ ॥

Regn.No.KAR/KAN/2000/2758 ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2520754
ಸಂಪುಟ–19 ಸಂಚಿಕೆ–10 ಪುಟಗಳು–8 Registered Under No.UDP/1260/2018-2020 Licenced to Post without Prepayment Licence No. SK/WPP/UDP/81/2018-20

## ಉಡುಪಿ ಶ್ರೀ ಶಾರದಾ ದೇವಸ್ಥಾನದಲ್ಲಿ ಸಂಭ್ರಮದ ಶರನ್ನವರಾತ್ರಿ




ಸಪ್ಟಂಬರ್ 29ರ ಪಾಡ್ಯದಿಂದ ಪ್ರಾರಂಭಗೊಂಡು ಅಕ್ಟೋಬರ್ 8ರ ವಿಜಯ ದಶಮಿಯವರೆಗೆ ಉಡುಪಿ ಕುಂಜಿಬೆಟ್ಟಿನ ಶ್ರೀ ಶಾರದಾ ಮಂಟಪ ಸಂಕೀರ್ಣದಲ್ಲಿ ನವರಾತ್ರಿಯ ಕಲರವ. ಬೆಳ್ಳಿ–ಬಂಗಾರ ಶೋಭಿತೆಯಾದ ಶ್ರೀ ಶಾರದಾ ಮಾತೆಗೆ ವಿವಿಧ ಬಗೆಯ ಅಲಂಕಾರ. ಪುಷ್ಪ ಪ್ರಿಯೆಯಾದ ಮಾತೆಗೆ ಬಗೆ ಬಗೆಯ ಪುಷ್ಪ ಶೃಂಗಾರ. ಭಕ್ತರೇ ಅರ್ಪಿಸಿದ ವಿವಿಧ ಸೀರೆಗಳಿಂದ ದಿನಕ್ಕೊಂದು ವರ್ಣಾಲಂಕಾರ, ದೇವಸ್ಥಾನದ ಒಳಗೆ ಪ್ರತಿದಿನ ಹೂವಿನ ತೋರಣ. ಸುತ್ತಲೂ ವಿದ್ಯುತ್ ದೀಪಗಳ ಸಾಲು. ಪ್ರತಿದಿನ ಭಕ್ತ ಜನರ ಆಗಮನ.

ಇದು ಮಾತೆ ಶ್ರೀ ಶಾರದೆಯ ನವರಾತ್ರಿ ವೈಭವ. ಕಳೆದ ವರ್ಷ ನೂತನ ಆಡಳಿತ ಮಂಡಳಿ ಕೈಗೊಂಡ ನಿರ್ಣಯದಂತೆ ನವರಾತ್ರಿಯ ಒಂಬತ್ತು ದಿನವೂ ಸಂಜೆ ಭಕ್ತರಿಂದ ಶ್ರೀ ದುರ್ಗಾನಮಸ್ಕಾರ ಪೂಜಾ ಸೇವೆಯು ಈ ವರ್ಷವೂ ಮುಂದುವರಿದು ಕಳೆದ ವರ್ಷಕ್ಕಿಂತ ಈ ವರ್ಷ ಉತ್ತಮ ಪ್ರತಿಕ್ರಿಯೆ ದೊರಕಿತು. ಶ್ರೀ ದೇವಸ್ಥಾನದಲ್ಲಿ ಶ್ರೀ ಸತೀಶ್ ಭಟ್ ಪೌರೋಹಿತ್ಯದಲ್ಲಿ ಪ್ರತಿದಿನ ಸಂಜೆ ಗಂಟೆ 6ರಿಂದ ದುರ್ಗಾನಮಸ್ಕಾರ ಪೂಜೆಯು ಪ್ರಾರಂಭಗೊಂಡು 8 ಗಂಟೆಗೆ ಮಂಗಳಾರತಿ ನಡೆಯುತ್ತಿತ್ತು. ಆಗಮಿಸಿದ ಭಕ್ತರು ಅನ್ನ ಪ್ರಸಾದ ಸ್ವೀಕರಿಸಿ ಮನೆಗೆ ತೆರಳುತ್ತಿದ್ದರು. ಶ್ರೀ ಶಾರದಾ ಮಂಟಪದಲ್ಲಿ ಸಂಜೆ 6ರಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮವೂ ಏರ್ಪಾಡಾಗಿತ್ತು. ಅದರ ಉದ್ಘಾಟನೆಯನ್ನು ಬ್ರಹ್ಮಾವರದ ನಿವೃತ್ತ ಪ್ರಾಂಶುಪಾಲರಾದ ಡಾ. ವೈ. ರವೀಂದ್ರನಾಥ್ ರಾವ್‌ರವರು ನೆರವೇರಿಸಿದರು.

ವಿಜಯ ದಶಮಿಯಂದು ಬೆಳಿಗ್ಗೆ 7.30ರಿಂದ ಶ್ರೀ ದೇವಳದಲ್ಲಿ ಪ್ರಾರ್ಥನೆಯೊಂದಿಗೆ ಶಾರದಾ ಮಂಟಪದಲ್ಲಿ ಶ್ರೀ ಚಂಡಿಕಾ ಯಾಗ ಪ್ರಾರಂಭಗೊಂಡಿತು. ಪಾವಂಜೆ ಶ್ರೀ ಜಗದೀಶ ಉಪಾಧ್ಯಾಯ ತಂಡದ ಪೌರೋಹಿತ್ಯದಲ್ಲಿ ಸಜೆ ಶ್ರೀ ಜನಾರ್ದನ ರಾವ್ ದಂಪತಿಗಳ ಕರ್ತೃತ್ವದಲ್ಲಿ ಸಮಾಜ ಬಾಂಧವರ ಕೂಡುವಿಕೆಯಿಂದ ಮಧ್ಯಾಹ್ನ 12.30ಕ್ಕೆ ಯಾಗ ಪೂರ್ಣಾಹುತಿ ಸಂಪನ್ನಗೊಂಡಿತು. ಇನ್ನೊಂದು ಕಡೆಯಲ್ಲಿ ವಿಜಯ ದಶಮಿಯ ಸಾಂಸ್ಕೃತಿಕ ಸ್ಪರ್ಧೆಗಳಾದ ಭಕ್ತಿ ಸಂಗೀತ, ಶ್ರೀಗಣೇಶ ಪಂಚರತ್ನ ಕಂಠಪಾಠ, ಚಿತ್ರರಚನೆ ಹಾಗೂ ರಂಗವಲ್ಲಿ ಸ್ಪರ್ಧೆಗಳು ನೆರವೇರಿದವು. ಮಧ್ಯಾಹ್ನ ಊಟದ ವೇಳೆ ಚೂರ್ಣಿಕೆ ಹೇಳುವ ಸ್ಪರ್ಧೆಯು ನಡೆಯಿತು. ಶ್ರೀಮತಿ ಹೇಮಲತಾ ಹಾಗೂ ಕುಮಾರಿ ದಿವ್ಯಶ್ರೀ ಪ್ರಧಾನ ತೀರ್ಪುಗಾರರಾಗಿ ಆಗಮಿಸಿದ್ದು, ಶ್ರೀ ವಸಂತ್‌ರಾವ್ ಕರಂಬಳ್ಳಿ, ಶ್ರೀ ವಿಕೇಶ್‌ರಾವ್, ಶ್ರೀ ಉಮೇಶ್ ರಾವ್ ನಂದಳಿಕೆ ಮತ್ತು ಶ್ರೀ ಜ್ಯೋತೀಂದ್ರ ರಾವ್ ಎಲ್ಲೂರು ತೀರ್ಪುಗಾರಿಕೆಯಲ್ಲಿ ಸಹಕರಿಸಿದರು. ಮಧ್ಯಾಹ್ನದ ಅನ್ನ ಸಂತರ್ಪಣೆಯಲ್ಲಿ ಸುಮಾರು 800 ಕ್ಕಿಂತಲೂ ಹೆಚ್ಚು ಜನರು ಭಾಗವಹಿಸಿದ್ದರು.

ಊಟದ ನಂತರ ಮಹಿಳಾ ವೇದಿಕೆಯ ವತಿಯಿಂದ ನಡೆದ ಸಾಂಸ್ಕೃತಿಕ ಕಾರ್ಯಕ್ರಮಗಳು ವೈವಿಧ್ಯಮಯವಾಗಿದ್ದು, ನೆರೆದ ಪ್ರೇಕ್ಷಕರ ಮನ ಸೂರೆಗೊಂಡಿತು. ನಂತರ ಸಭಾ ಕಾರ್ಯಕ್ರಮವು ಆಯೋಜನೆಗೊಂಡಿತು. ಶ್ರೀ ಚಂಡಿಕಾ ಯಾಗದ ಕರ್ತೃಗಳಾದ ಶ್ರೀ ಸಜೆ ಜನಾರ್ದನರಾವ್, ಸಾಂಸ್ಕೃತಿಕ ಸ್ಪರ್ಧೆಗಳ ಬಹುಮಾನಗಳ ಪ್ರಾಯೋಜಕರಾದ ಸಂಘದ ಮಾಜಿ ಅಧ್ಯಕ್ಷ ಶ್ರೀ ವೈ ಭುವನೇಂದ್ರ ರಾವ್, ಮತ್ತು ಶ್ರೀಮತಿ ಸುನಂದ ಸಿ.ಎಸ್.ರಾವ್ ಚಿಟ್ಪಾಡಿಯವರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಸಂಘದ ಕಾರ್ಯದರ್ಶಿ ಶ್ರೀ ಅರವಿಂದ ಕುಮಾರ್ ಪ್ರಾಸ್ತಾವಿಕ ಮಾತನಾಡಿ ಎಲ್ಲರನ್ನೂ ಸ್ವಾಗತಿಸಿದರು. 2019–20ನೇ ಸಾಲಿನ ವಿದ್ಯಾರ್ಥಿವೇತನವನ್ನು (ಒಟ್ಟು 177 ವಿದ್ಯಾರ್ಥಿಗಳಿಗೆ ರೂ 3,62,000) ವಿದ್ಯಾರ್ಥಿಗಳಿಗೆ ಚೆಕ್ ಮೂಲಕ ವಿತರಿಸಲಾಯಿತು. ಪ್ರತಿವರ್ಷದಂತೆ ಎಸ್.ಎಸ್.ಎಲ್.ಸಿ ಹಾಗೂ ಪಿ.ಯು.ಸಿ (ಮೂರೂ ವಿಭಾಗಗಳ) ವಿದ್ಯಾರ್ಥಿಗಳಿಗೆ 'ಉದಯಚಂದ್ರ ಪ್ರತಿಭಾ ಪುರಸ್ಕಾರ' ನೀಡಿ ಗೌರವಿಸಲಾಯಿತು. ಡಾ। ದಯಾನಂದ ರಾವ್ ಸಾಲವಿದ್ಯಾರ್ಥಿ ವೇತನದ ವಿವರವನ್ನು ಸಭೆಗೆ ತಿಳಿಸಲಾಯಿತು. ಅಂದಿನ ಸಾಂಸ್ಕೃತಿಕ ಸ್ಪರ್ಧೆಗಳ ವಿಜೇತರಿಗೆ ನಗದು ಪುರಸ್ಕಾರದೊಂದಿಗೆ ಪ್ರಶಸ್ತಿಪತ್ರವನ್ನು ವೇದಿಕೆಯಲ್ಲಿರುವ ಗಣ್ಯರು ವಿತರಿಸಿದರು. ಭರತ ನಾಟ್ಯದಲ್ಲಿ ರಾಜ್ಯ ಮಟ್ಟದಲ್ಲಿ ಪ್ರಥಮ ಸ್ಥಾನಿಯಾದ ಕು। ಪ್ರೇರಣಾಳನ್ನು ಗುರುತಿಸಿ ಗೌರವಿಸಲಾಯಿತು. (3ನೇ ಪುಟಕ್ಕೆ...)

## ಶ್ರೀ ಶಾರದಾ ಮಂಟಪದಲ್ಲಿ ಋಗುಪಾಕರ್ಮ



ತಾ.11–09–2019ರಂದು ಉಡುಪಿ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘದ ವತಿಯಿಂದ ಸೌರ ಋಗುಪಾಕರ್ಮವನ್ನು ಆಚರಿಸಲಾಯಿತು. ಸುಮಾರು 70 ಜನ ಸಮಾಜಬಾಂಧವರು ಹಾಗೂ ವಟುಗಳು ಭಾಗವಹಿಸಿದ್ದರು. ಸಂಘದ ಉಪಾಧ್ಯಕ್ಷರಾದ ಶ್ರೀ ಬಿ.ಕೃಷ್ಣಮೂರ್ತಿ ರಾಯರು ಕರ್ತೃಗಳಾಗಿ ಧಾರ್ಮಿಕ ವಿಧಿವಿಧಾನಗಳನ್ನು ನೆರವೇರಿಸಿದರು. ಶ್ರೀ ರವಿ ಉಪಾಧ್ಯಾಯರವರು ಪುರೋಹಿತರಾಗಿ ಆಗಮಿಸಿದ್ದರು. ಪ್ರಸಾದ ಭೋಜನದೊಂದಿಗೆ ಕಾರ್ಯಕ್ರಮವು ಕೊನೆಗೊಂಡಿತು.

## ಶ್ರದ್ಧಾಂಜಲಿ



**ಶ್ರೀಮತಿ ಶೋಭಾ ಎಸ್. ರಾವ್**

ಜನನ : 06–04–1949 ನಿಧನ : 25–09–2019

ನಮ್ಮನ್ನಗಲಿದ ನಿಮ್ಮ ಆತ್ಮಕ್ಕೆ ಪರಮಾತ್ಮನು ಸದ್ಗತಿಯನ್ನು
ಕರುಣಿಸಲಿ ಎಂದು ಪ್ರಾರ್ಥಿಸುವ

ಬೈಕಾಡಿ ಡಾ। ಸೂರ್ಯನಾರಾಯಣ ರಾವ್
ಶ್ರೀಮತಿ ಡಾ। ಪ್ರಸನ್ನ ಮತ್ತು ಡಾ। ಅನಿಲ್ ಕುಮಾರ್
ಶ್ರೀಮತಿ ಅನುಪಮಾ ಮತ್ತು ಶ್ರೀ ಬೆಳ್ಳೆ ರಾಜಶೇಖರ ರಾವ್
ಶ್ರೀಮತಿ ಮತ್ತು ಶ್ರೀ ಬೈಕಾಡಿ ದೇವರಾಜ ರಾವ್
ಹಾಗೂ ಮೊಮ್ಮಕ್ಕಳು

# ಸಂಪಾದಕೀಯ.....

– ಡಾ। ವೈ. ಸುದರ್ಶನ್ ರಾವ್

ಇತ್ತೀಚಿಗೆ ಗಮನಿಸಿದಂತೆ ಸ್ಥಾನಿಕ ಸಮಾಜವೂ ಸೇರಿಸಿ ನಮ್ಮ ಸಮಾಜದಲ್ಲಿ ಭಜನೆ ಪುನಃ ಜನಪ್ರಿಯವಾಗುತ್ತಿದೆ. ಇದಕ್ಕೆ ಕಾರಣ ಹಲವಾರು ಇರಬಹುದು. ಆದರೆ ಇದೊಂದು ಆರೋಗ್ಯಕರ ಬೆಳವಣಿಗೆ ಎನ್ನುವುದರಲ್ಲಿ ಸಂದೇಹವೇ ಇಲ್ಲ

ಭಜನೆ ಭಕ್ತಿ ಪಂಥದ ಬಳುವಳಿ. ಸುಮಾರು 13 ರಿಂದ 16ನೆಯ ಶತಮಾನದಲ್ಲಿ ಆಗಿಹೋದ ಭಕ್ತಿ ಪಂಥದ ಪ್ರಮುಖರಾದ ಪುರಂದರ ದಾಸರು, ಕನಕದಾಸರು ತುಳಸೀ ದಾಸರು ಬಸವಣ್ಣನವರು ಇತ್ಯಾದಿ ಮಹನೀಯರು ಜನಸಾಮಾನ್ಯರು ವೈದಿಕ ಕರ್ಮಾಚರಣೆಯ ಅನುಷ್ಠಾನದಲ್ಲಿ ಅನುಭವಿಸುತ್ತಿದ್ದ ಕಷ್ಟಗಳನ್ನು ಅರಿತು ಮೋಕ್ಷಸಾಧನೆಗೆ ಸುಲಭವಾದ ಭಕ್ತಿ ಮಾರ್ಗವನ್ನು ಭೋಧಿಸಿದರು. ಅವರು ಜನರ ಆಡುಭಾಷೆಯಲ್ಲಿ ರಚಿಸಿದ, ಸುಲಭವಾಗಿ ಅರ್ಥವಾಗುವ, ಪ್ರಾಸಬದ್ಧವಾದ, ಭಕ್ತಿಭಾವವನ್ನು ಸ್ಫುರಿಸುವ, ಸದ್ಬೋಧನೆಯನ್ನೀಯುವ, ತಪ್ಪುಗಳನ್ನು ಖಂಡಿಸುವ ನೀತಿಯುಕ್ತವಾದ, ರಾಗವಾದ ಹಾಡುಗಳೇ ಭಜನೆಗಳಾಗಿ ಪ್ರಸಿದ್ಧವಾಗಿವೆ. ಹಲವಾರು ಜನರು ಕೂಡಿ ಹಾಡುವ ಕ್ರಮದಿಂದಾಗಿ ಭಜನೆ ಎಂಬ ಹೆಸರು ಬಂತೆಂದು ಹೇಳುತ್ತಾರೆ(ಭಜ ಎಂದರೆ ಗುಂಪು ಎಂದರ್ಥ) ಮುಸಲ್ಮಾನರ ಹಾಗೂ ಕ್ರಿಶ್ಚಿಯನ್ ಧರ್ಮಗಳ ಪ್ರಭಾವ ಹೆಚ್ಚುತ್ತಿದ್ದ ಆ ಕಾಲದಲ್ಲಿ ಹಿಂದೂ ಧರ್ಮವನ್ನು ಪುನರ್ ಸಂಘಟಿಸಿದ್ದು ಈ ಭಜನೆಗಳೇ ಎಂದರೆ ತಪ್ಪಲ್ಲ. ಈಗಲೂ ಕೂಡಿ ಹಾಡುವ ಭಜನೆಮಾಡುವ ಕ್ರಮವು ಚಿತ್ತಶುದ್ಧಿಯೊಂದಿಗೆ ಸಂಘಟನೆಯನ್ನೂ ಬಲಪಡಿಸುತ್ತದೆ.

ನಮ್ಮ ಸ್ಥಾನಿಕ ಸಮಾಜದಲ್ಲೂ ಭಜನೆ ಜನಪ್ರಿಯವಾಗುತ್ತಿದೆ.ಇದಕ್ಕೆ ಸ್ಪಷ್ಟ ಉದಾಹರಣೆಯೆಂದರೆ ಉಡುಪಿಯ ಶ್ರೀ ಶಾರದಾ ಭಜನಾ ತಂಡ. ಉಡುಪಿಯಲ್ಲಿ ಕ್ರಿಯಾಶೀಲವಾಗಿದ್ದು ಶಾರದಾ ದೇವಸ್ಥಾನದಲ್ಲಿ ಪ್ರತಿದಿನವೂ ಭಜನೆ ನಡೆಸುವುದರ ಜೊತೆಗೆ ಹತ್ತಿರದ ಹಲವಾರು ದೇವಸ್ಥಾನಗಳಲ್ಲಿ ಆಹ್ವಾನದ ಮೇರೆಗೆ ಕಾರ್ಯಕ್ರಮವನ್ನು ನೀಡುತ್ತಿದೆ. ಹೊಸ ಹೊಸ ಭಜನೆಗಳನ್ನು ಕಲಿತು ಹಾಡುವುದರ ಮೂಲಕ ವಿಶಿಷ್ಟತೆಯನ್ನು ಬೆಳೆಸಿಕೊಂಡಿದೆ. ಇವರು ಇತ್ತೀಚೆಗೆ ಪುತ್ತೂರಿನ ನಾಲೂರು ಶಂಕರನಾರಾಯಣ ದೇವಸ್ಥಾನದ ಬ್ರಹ್ಮಕಲಶೋತ್ಸವದಲ್ಲಿ ಕಾರ್ಯಕ್ರಮ ನೀಡಿದ್ದರು. ಈ ಬಾರಿಯ ನವರಾತ್ರಿಯಲ್ಲಿ ಪುತ್ತೂರಿನ ಮಠಂತಬೆಟ್ಟು, ಮುಂಡ್ಕೂರಿನ ಅನ್ನಪೂರ್ಣೇಶ್ವರಿ ದೇವಸ್ಥಾನವೂ ಸೇರಿದಂತೆ ಹಲವಾರು ದೇವಸ್ಥಾನಗಳಲ್ಲಿ ಕಾರ್ಯಕ್ರಮ ನೀಡಿದ್ದಾರೆ. ಇದು ಉಡುಪಿಯ ಕಥೆಯಾದರೆ ಹತ್ತಿರದ ಬ್ರಹ್ಮಾವರದಲ್ಲಿ, ಪಡುಬಿದ್ರೆಯಲ್ಲಿ, ಮಂಗಳೂರಿನಲ್ಲಿಯೂ ನಮ್ಮವರ ಭಜನಾ ತಂಡಗಳು ಸಕ್ರಿಯವಾಗಿವೆ. ಮಂಗಳೂರಿನಲ್ಲಿ ಪೊಳಲಿ ಸುಬ್ಬರಾಯರ ನೇತೃತ್ವದಲ್ಲಿ ಭಜನಾ ಕಲಿಕೆಯ ಕ್ಲಾಸುಗಳು ಸಮಾಜಬಾಂದವರ ಅಪೇಕ್ಷೆಯ ಮೇರೆಗೆ ಆರಂಭವಾಗಿವೆ. ಇತ್ತೀಚಿಗೆ ಮೂಡಬಿದ್ರೆ ಸಂಘದಲ್ಲೂ ಭಜನಾ ಮಂಡಳಿ ಸ್ಥಾಪನೆಯಾಗಿದ್ದು ವಾರಕ್ಕೊಮ್ಮೆ ಒಬ್ಬರ ಮನೆಯಲ್ಲಿ ಭಜನೆ ಹಾಡುವ ಪರಿಪಾಟ ಆರಂಭಿಸಿದ್ದಾರೆ. ಆ ಸಂಘದ ಕಾರ್ಯಕ್ರಮದಲ್ಲಿ ಈ ಸಂಘದವರು ಹಾಗೂ ಇವರ ಕಾರ್ಯಕ್ರಮದಲ್ಲಿ ಅವರು ಭಾಗವಹಿಸುವುದರ ಮೂಲಕ ಭಜನಾ ತಂಡದವರು ಸಂಘ ಸಂಘಗಳ ಮಧ್ಯೆ ಸಂಪರ್ಕ ಸೇತುವಾಗಿದ್ದಾರೆಂದರೆ ತಪ್ಪಲ್ಲ.

ಭಜನೆ ನಮ್ಮ ಸಂಸ್ಕೃತಿಯ ಪ್ರತಿಬಿಂಬವೂ ಆಗಬೇಕು. ಪ್ರಚಲಿತದಲ್ಲಿರುವ ಭಜನೆಗಳನ್ನು ಕಲಿತು ಹಾಡುವುದರೊಂದಿಗೆ ನಮ್ಮ ಸಂಪ್ರದಾಯದ, ಶ್ರೀ ಶಂಕರಾಚಾರ್ಯರ ಕೃತಿಗಳ, ಶೃಂಗೇರಿ ಗುರುಗಳ ಕೃತಿಗಳ ಹಾಗೂ ನಮ್ಮವರು ಅನೇಕರು ಬರೆದ ಭಜನೆಗಳಿಗೆ ರಾಗ ಸಂಯೋಜಿಸಿ ಹಾಡುವ ಪ್ರಯತ್ನ ನಡೆದರೆ ಈ ಭಜನಾ ತಂಡಗಳು ಸ್ಥಾನಿಕ ಸಮಾಜದ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ರಾಯಭಾರಿಗಳಾಗುತ್ತವೆ.

ನಮ್ಮ ದೇವಸ್ಥಾನಗಳು ಉತ್ಸವ ನವರಾತ್ರಿ ಇತ್ಯಾದಿ ವಿಶೇಷ ದಿನಗಳಲ್ಲಿ ಈ ಎಲ್ಲ ಭಜನಾತಂಡಗಳನ್ನು ಆಹ್ವಾನಿಸಿ ಅವರಿಂದ ಕಾರ್ಯಕ್ರಮವನ್ನು ಒಂದೊಂದು ಸಮಯ/ದಿನದಲ್ಲಿ ಏರ್ಪಡಿಸಬಹುದು. ಇದರಿಂದ ಆ ದೇವಸ್ಥಾನದಲ್ಲಿ ದಿನವಿಡೀ ಕಾರ್ಯಕ್ರಮ ನಡೆಸಿದಂತಾಗುತ್ತದೆ. ದೇವಸ್ಥಾನದ ಕಾರ್ಯಕ್ರಮಕ್ಕೆ ನಮ್ಮ ಸಮಾಜದೊಳಗೆ ಉತ್ತಮ ಪ್ರಚಾರ ಸಿಗುತ್ತದೆ. ಹಾಗೂ ನಮ್ಮ ಸಮಾಜಬಾಂಧವರು ದೇವಸ್ಥಾನದ ಕಾರ್ಯಕ್ರಮಗಳಿಗೆ ಬರುವುದಿಲ್ಲವೆನ್ನುವ ಕೊರಗೂ ತಪ್ಪುತ್ತದೆ. ಹೆಚ್ಚು ಹೆಚ್ಚು ಕಾರ್ಯಕ್ರಮಗಳಾದಂತೆ, ಹೆಚ್ಚು ಹೆಚ್ಚು ಜನರು ಭಾಗವಹಿಸಿದಂತೆ, ಹೆಚ್ಚು ಹೆಚ್ಚು ಸಂಘಗಳ ಪದಾಧಿಕಾರಿಗಳು

ಸಂಪಾದಕ ಮಂಡಳಿ

ಡಾ। ವೈ. ಸುದರ್ಶನ ರಾವ್, ಕುಕ್ಕಿಕಟ್ಟೆ
ಶ್ರೀ ಸುರೇಶ್ ಶ್ಯಾನುಭಾಗ್, ಇಂದ್ರಾಳಿ
ಶ್ರೀ ಟಿ. ಸುರೇಶ್ ರಾವ್, ನಿಟ್ಟೂರು
ಶ್ರೀ ಪ್ರಭಾಕರ ಭಂಡಿ, ಪೆರ್ಡೂರು
ಶ್ರೀ ವೈ. ಭುವನೇಂದ್ರ ರಾವ್, ಕೊರಂಗ್ರಪಾಡಿ

ಭೇಟಿಯಿತ್ತಂತೆ ದೇವಳಗಳ ಆಡಳಿತಗಾರರ ಉತ್ಸಾಹ ಹೆಚ್ಚುತ್ತದೆ. ತಾನು ಮಾಡಿದ ಕೆಲಸ ಸಾರ್ಥಕವಾಯಿತೆನ್ನುವ ತೃಪ್ತಿ ಸಿಗುತ್ತದೆ. ಇದೂ ಒಂದು ಸಕಾರಾತ್ಮಕವಾದ ಬೆಳವಣಿಗೆ

ಕುಣಿತ ಭಜನೆಯು ಭಜನೆಯ ಇನ್ನೊಂದು ಆಯಾಮ. ವೈಷ್ಣವ ಪಂಥದಲ್ಲಿ ಇದು ಹೆಚ್ಚು ಪ್ರಚಲಿತವಾಗಿದೆ. ಉಡುಪಿಯ ತುಳಸಿ ಸಂಕೀರ್ತನೆ ಇದಕ್ಕೊಂದು ಉತ್ತಮ ಉದಾಹರಣೆ. ರಾಗದೊಂದಿಗೆ ಹೆಜ್ಜೆಯ ತಾಳ ಇದರ ವಿಶಿಷ್ಟತೆ. ಈ ಬಾರಿ ನಮ್ಮ ಸಂಘದ ವಿಜಯದಶಮಿಯ ಕಾರ್ಯಕ್ರಮದಲ್ಲಿ ಶ್ರೀ ಶ್ರೀ ಭಾರತೀತೀರ್ಥರು ರಚಿಸಿದ್ದ ಕೃತಿಯೊಂದಕ್ಕೆ ಕೋಲಾಟವನ್ನು ಸಂಯೋಜಿಸಿ ಪ್ರಸ್ತುತ ಪಡಿಸಿದ ಕಾರ್ಯಕ್ರಮವು ಅತ್ಯಂತ ಮಧುರವಾಗಿ ಮೂಡಿಬಂದಿತ್ತು. ಇಂತಹಾ ಇನ್ನಷ್ಟು ಇಂತಹಾ ಕೃತಿಗಳಿಗೆ ರಾಗ ಹೆಜ್ಜೆ ಸಂಯೋಜನೆಯಾಗಲಿ, ಹೊಸತನವೊಂದಕ್ಕೆ ನಾಂದಿಯಾಗಲಿ, ಅಂತರಾಷ್ಟ್ರೀಯ ಮಟ್ಟದಲ್ಲಿ ಇದು ಪ್ರಸಿದ್ಧಿಯಾಗಲಿ ಎಂದು ಆಶಿಸುತ್ತೇನೆ.

ನಮ್ಮ ಸಂಘಗಳು ಈ ಭಜನಾ ತಂಡಗಳಿಗೆ ಬೇಕಾದ ಸಣ್ಣ ಪುಟ್ಟ ಅನುಕೂಲತೆಗಳನ್ನು ಮಾಡಿಕೊಡಬೇಕು, ಸಮಾಜಬಾಂಧವರು ತಮ್ಮ ತಮ್ಮ ಮಕ್ಕಳನ್ನು ಈ ತಂಡಗಳಲ್ಲಿ ಸೇರಿಸಿ ಈ ಹಾಡುಗಳನ್ನು ಕಲಿಯಲು ಪ್ರೋತ್ಸಾಹಿಸಬೇಕು. ದೇವಸ್ಥಾನಗಳು ಭಜನಾ ಸ್ಪರ್ಧೆ ಏರ್ಪಡಿಸುವುದೋ ಅಥವಾ ಈ ತಂಡಗಳನ್ನು ಗುರುತಿಸಿ ಗೌರವಿಸುವುದರ ಮೂಲಕ ಪ್ರೋತ್ಸಾಹಿಸಬೇಕು. ಹೀಗೆ ಯಾವುದೋ ಕಾರಣಕ್ಕೆ ಚಿಗುರೊಡೆದಿರುವ ಈ ಸಸಿಯೊಂದಕ್ಕೆ ಪ್ರೋತ್ಸಾಹದ ನೀರುಗೊಬ್ಬರವಿತ್ತು ಪೋಷಿಸುವುದು ನಮ್ಮೆಲ್ಲರ ಕರ್ತವ್ಯ.

ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)
ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ – 576 101. ಫೋನ್ : 2522408

ನಿಮ್ಮ ಕನಸಿನ ಮನೆ ಸಾಕಾರಗೊಳಿಸಿ
“ಗೃಹ ಸಾಲ”
ಸಂಘದ ಪ್ರಾಥಮಿಕ ಸದಸ್ಯರಿಗೆ 11.50%
(ಷರತ್ತುಗಳು ಅನ್ವಯ)

| | | |
|---|---|---|
| ವಾಹನ ಸಾಲ | : | 12.5% |
| ಹಳೆಯ ವಾಹನ | : | 14% |
| ಆಭರಣ ಸಾಲ | : | 12.5% |
| ವೈಯಕ್ತಿಕ ಸಾಲ | : | 16% |
| ಶಿಕ್ಷಣ ಸಾಲ | : | 12% |
| ಅಡಮಾನ ಸಾಲ | : | 13% |

ಠೇವಣಿಗಳ ಬಡ್ಡಿದರ

| | | | |
|---|---|---|---|
| ಉಳಿತಾಯ ಖಾತೆ | : 5% | ನಿತ್ಯನಿಧಿ ಠೇವಣಿ | : 5% |
| 46 ದಿನಗಳಿಂದ 364 ದಿನಗಳು | : 6%, | 1 ವರ್ಷ ಮತ್ತು ಹೆಚ್ಚಿನ ಅವಧಿಗೆ | : 9% |

(ಹಿರಿಯ ನಾಗರಿಕರಿಗೆ/ಸಂಘ ಸಂಸ್ಥೆಗಳಿಗೆ 1 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಗಳಿಗೆ 0.5% ಹೆಚ್ಚಿಗೆ ನೀಡಲಾಗುವುದು)

2011-12ರಿಂದ 2016-17ನೇ ವರ್ಷದ ವರೆಗಿನ ಲಾಭಾಂಶವನ್ನು ಪಡೆದುಕೊಳ್ಳದಿರುವ ಸದಸ್ಯರು ಸಂಘದ ವ್ಯವಹಾರದ ಸಮಯದಲ್ಲಿ ಬಂದು ಪಡೆದುಕೊಳ್ಳಬಹುದು. ಅಥವಾ ತಮ್ಮ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆದಲ್ಲಿ ಪ್ರತಿ ವರ್ಷದ ಲಾಭಾಂಶವನ್ನು ಉಳಿತಾಯ ಖಾತೆಗೆ ಜಮೆ ಮಾಡಲಾಗುವುದು.

ನಿಮ್ಮ ಹತ್ತಿರದ ಶಾಖೆಯನ್ನು ಇಂದೇ ಸಂಪರ್ಕಿಸಿರಿ
ಪ್ರಧಾನ ಕಛೇರಿ (☎ 2522408) ಕುಕ್ಕಿಕಟ್ಟೆ ಶಾಖೆ (☎ 2592133) ಪಡುಬಿದ್ರಿ ಶಾಖೆ (☎ 2556608) ಕೋಟೇಶ್ವರ ಶಾಖೆ (☎ 9341854114)


With Best Compliments from :
Dr. Sanath S. Rao
M.B.B.S., M.D.(Derm, Vene, Lep)
Fellow Cosmetology (St. John's Hospital)
SKIN SPECIALIST & COSMETOLOGIST
Clinic : 0820-6529474
Mobile : 9886093199
drsanathrao@gmail.com
JALAJA SKIN CARE AND COSMETOLOGY CLINIC
Sai Harsha Square, Koladapete (Thenkapete), Old Post Office Road, Udupi - 576 101.
Visit us at : www.jalajaskincare.com
Timings : 9-30 a.m. to 2-00 p.m., 4-30 p.m. to 8-00 p.m.
Also available at Lalith Hospital (12-30 a.m. to 2-00 p.m.)

With Best Compliments From :
***Rajathadri Hotel Pvt. Ltd.
Lodging & Boarding
Sri Ramesh Shanubhag, Usha, Sanketh and Kavitha
Directors


OUR FACILITIES
★ A/c Rooms ★ Deluxe Rooms ★ 3, 4, 5 Cot Rooms
★ Room Service ★ T.V. with Cable Connection ★ Hot Water
SHIVAJI CIRCLE, POWAI NAKA, SATARA-415001
Ph : 02162-234017, 233818
Fax : 02162-233885 E-mail : rajathadri.satara@gmail.com

■...1ನೇ ಪುಟದಿಂದ

# ಉಡುಪಿ ಶ್ರೀ ಶಾರದಾ ದೇವಸ್ಥಾನದಲ್ಲಿ ಸಂಭ್ರಮದ ಶರನ್ನವರಾತ್ರಿ

ಶ್ರೀ ವೈ. ಭುವನೇಂದ್ರ ರಾವ್‌ರವರು ಇಂದಿನ ಆಡಳಿತ ಮಂಡಳಿಯ ಕಾರ್ಯ ವೈಖರಿಯ ಬಗ್ಗೆ ಶ್ಲಾಘಿಸುತ್ತಾ ಸಂಘವು ಕೈಗೊಳ್ಳುವ ಪ್ರತಿಯೊಂದು ಕೆಲಸ ಗಳಲ್ಲಿಯೂ ಸಮಾಜ ಬಾಂಧವರು ಇದೇ ರೀತಿಯ ಸಹಕಾರ ನೀಡಬೇಕೆಂದು ಕರೆ ನೀಡಿದರು. ಸಂಘದ ಅಧ್ಯಕ್ಷರಾದ ಶ್ರೀ ಮಂಜುನಾಥ ಹೆಬ್ಬಾರ್ ನವರಾತ್ರಿಯ ದಿನಗಳಲ್ಲಿ ಸಹಕರಿಸಿದ ಎಲ್ಲರಿಗೂ ಧನ್ಯವಾದ ಅರ್ಪಿಸಿದರು. ಅಲ್ಲದೆ ವಿಶೇಷವಾಗಿ ಸಹಕರಿಸಿದ ಸಂಘದ ಮೆನೇಜರ್ ಶ್ರೀ ಅಜಿತ್‌ರಾವ್, ಸಹಾಯಕ ಮೆನೇಜರ್ ಶ್ರೀ ನಾಗಭೂಷಣ್ ರಾವ್, ಅಡುಗೆ ಸಹಾಯಕರಾದ ಶ್ರೀ ಸುಬ್ರಹ್ಮಣ್ಯ ಭಟ್, ಮತ್ತು ದೇವತಾ ಕಾರ್ಯದಲ್ಲಿ ಸಹಕರಿಸಿದ ಸುವೇದ ಹೆಬ್ಬಾರ್ ಮೊದಲಾದವರನ್ನು ಶಾಲು, ಫಲ, ಪುಷ್ಪ, ಸ್ಮರಣಿಕೆ ನೀಡಿ ಗೌರವಿಸಲಾಯಿತು. ಶ್ರೀ ಕೃಷ್ಣಮೂರ್ತಿ ರಾವ್ ಬ್ರಹ್ಮಾವರ ಬಹುಮಾನಿತರ ವಿವರ ನೀಡಿದರು. ಶ್ರೀ ಪ್ರಭಾಕರ ಭಂಡಿ ಪ್ರತಿಭಾ ಪುರಸ್ಕಾರದ ವಿವರ ಓದಿದರು. ಶ್ರೀ ಕೃಷ್ಣಕುಮಾರ್ ರಾವ್ ಮಟ್ಟು ಕಾರ್ಯಕ್ರಮ ನಿರೂಪಿಸಿದರು. ಸಂಜೆ ಗಂಟೆ 6ರಿಂದ "ಶ್ರೀ ಶಾರದಾ ಹವ್ಯಾಸಿ ಯಕ್ಷಗಾನ ಕಲಾವಿದರು" ತಂಡದಿಂದ 'ಮೈಂದ ದ್ವಿವಿದ'–'ಮಹಾಮಂತ್ರಿ ದುಷ್ಟಬುದ್ಧಿ' ಯಕ್ಷಗಾನ ಪ್ರದರ್ಶಿತವಾಯಿತು.

**ವರದಿ:–ಕೃಷ್ಣಕುಮಾರ್ ರಾವ್, ಮಟ್ಟು**

## ಪ್ರತಿಭಾ ಪುರಸ್ಕೃತರ ವಿವರ

**2019–20ನೇ ಸಾಲಿನ ಉದಯಚಂದ್ರ ಪ್ರತಿಭಾ ಪುರಸ್ಕಾರದ ವಿಜೇತರು :**

1. ಎಸ್‌ಎಸ್‌ಎಲ್‌ಸಿ–ಮಾರ್ಚ್2019 : **ಕು.ಭೂಮಿಕಾ** (ಶ್ರೀ ಪಿ.ಶ್ರೀನಿವಾಸ ರಾವ್ ಹಾಗೂ ಶ್ರೀಮತಿ ಮಮತಾ ಎಸ್ ರಾವ್ ಪುತ್ತಿಗೆ ಮೂಡಬಿದ್ರೆ ಇವರ ಪುತ್ರಿ)
2. ಪಿಯುಸಿ (ಕಲಾ) ಮಾರ್ಚ್2019 : **ಮಾ. ಉಲ್ಲಾಸ್** (ಶ್ರೀ ನಿತ್ಯಾನಂದ ಹಾಗೂ ಶ್ರೀಮತಿ ಸುವರ್ಣ ಧರ್ಮಸ್ಥಳ ಇವರ ಪುತ್ರ)
3. ಪಿಯುಸಿ (ವಿಜ್ಞಾನ) ಮಾರ್ಚ್2019 : **ಕು.ಸನ್ನಿಧಿ ರಾವ್** (ಶ್ರೀ ಹರೀಶ್ ಕುಮಾರ್ ಹಾಗೂ ಶ್ರೀಮತಿ ಅಶ್ವಿನಿ ಕುಕ್ಕುಂದೂರು ಕಾರ್ಕಳ ಇವರ ಪುತ್ರಿ)
4. ಪಿಯುಸಿ (ವಾಣಿಜ್ಯ)–ಮಾರ್ಚ್2019 : **ಮಾ.ರಾಹುಲ್ ರಾವ್ ಕೆ** (ಶ್ರೀ ರಮೇಶ್‌ರಾವ್ ಕೆ ಹಾಗೂ ಶ್ರೀಮತಿ ಶೈಲಜಾ ಕಾರ್ಕಳ ಇವರ ಪುತ್ರ)

**ಗುರುತಿಸಿ ಗೌರವಿಸಿದ್ದು :**

**ಕು. ಎಂ ಪ್ರೇರಣಾ ರಾವ್** (ಡಾ। ಸಂತೋಷ್ ರಾವ್ ಹಾಗೂ ಶ್ರೀಮತಿ ಪ್ರೀತಿ ಎಸ್.ರಾವ್ ಚಿಟ್ಪಾಡಿ ಉಡುಪಿ ಇವರ ಪುತ್ರಿ) – **ಕರ್ನಾಟಕ ರಾಜ್ಯ ಭರತನಾಟ್ಯ ಪರೀಕ್ಷೆಯ ಸೀನಿಯರ್ ವಿಭಾಗದಲ್ಲಿ ರಾಜ್ಯಮಟ್ಟದಲ್ಲಿ ಪ್ರಥಮ ಸ್ಥಾನ**

## ವಿಜಯ ದಶಮಿಯ ಸಾಂಸ್ಕೃತಿಕ ಸ್ಪರ್ಧೆಗಳ ವಿಜೇತರ ವಿವರ

**ಚಿತ್ರ ರಚನೆ (4ನೇ ತರಗತಿ ವರೆಗೆ) :** ಪ್ರಥಮ–ಸಂಕಲ್ಪ್ ಕುಮಾರ್ ಕುಂಭಾಶಿ, ದ್ವಿತೀಯ–ಅದಿತಿ ಹೆಬ್ಬಾರ್ ಉಡುಪಿ, ತೃತೀಯ–ಗಗನ್ ಡಿ.ರಾವ್, ದೆಂದೂರುಕಟ್ಟೆ

**ಚಿತ್ರ ರಚನೆ (5ನೇ ರಿಂದ 8ನೇ ತರಗತಿ ವರೆಗೆ) :** ಪ್ರಥಮ–ಅವ್ಯಕ್ತ್, ದ್ವಿತೀಯ–ಸ್ಕಂದ ರಾವ್, ತೃತೀಯ–ಸ್ಕಂದ ಶ್ಯಾನುಭಾಗ್

**ಚಿತ್ರ ರಚನೆ (9 ರಿಂದ ಪದವಿ ಪೂರ್ವ ತನಕ) :** ಪ್ರಥಮ–ಆದಿತ್ಯ ರಾವ್, ದ್ವಿತೀಯ–ಅದಿತಿ ಕಾರ್ಕಳ, ತೃತೀಯ–ಶ್ರಾವ್ಯಾ ರವಿಶಂಕರ್, ಬೆಂಗಳೂರು

**ರಂಗವಲ್ಲಿ (4ನೇ ತರಗತಿ ವರೆಗೆ) :** ಪ್ರಥಮ–ಸಂಕಲ್ಪ್ ಕುಮಾರ್ ಕುಂಭಾಶಿ, ದ್ವಿತೀಯ–ಸಂಕರ್ಷಣ ರಾವ್ ನಿಟ್ಟೂರು, ತೃತೀಯ–ದ್ಯುತಿ ಹೆಬ್ಬಾರ್, ಉಡುಪಿ

**ರಂಗವಲ್ಲಿ (5ನೇ ರಿಂದ 8ನೇ ತರಗತಿ ವರೆಗೆ) :** ಪ್ರಥಮ–ಅಮಿತ್ ರಾವ್ ಕಾಪು, ದ್ವಿತೀಯ–ಚಿನ್ಮಯಿ ರಾವ್ ದೆಂದೂರುಕಟ್ಟೆ, ತೃತೀಯ–ಕೆ. ಸುಬ್ರಹ್ಮಣ್ಯ ನೆಲ್ಲಿಕಟ್ಟೆ

**ರಂಗವಲ್ಲಿ (9ರಿಂದ ಪದವಿ ಪೂರ್ವ ತನಕ) :** ಪ್ರಥಮ–ಶ್ರಾವ್ಯಾ ರವಿಶಂಕರ್ ಬೆಂಗಳೂರು, ದ್ವಿತೀಯ–ದೀಪಾಲೀ ಪಿ.ರಾವ್, ತೃತೀಯ–ಅಕ್ಷತಾ

**ರಂಗವಲ್ಲಿ (5ನೇ ರಿಂದ 8ನೇ ತರಗತಿ ವರೆಗೆ) :** ಪ್ರಥಮ–ಚಿನ್ಮಯಿ ರಾವ್ ದೆಂದೂರುಕಟ್ಟೆ, ದ್ವಿತೀಯ–ಕೆ. ಸುಬ್ರಹ್ಮಣ್ಯ ನೆಲ್ಲಿಕಟ್ಟೆ

**ರಂಗವಲ್ಲಿ (9ರಿಂದ ಪದವಿ ಪೂರ್ವ ತನಕ) :** ಪ್ರಥಮ–ಅದಿತಿ ಉಡುಪಿ, ದ್ವಿತೀಯ–ಸವಿತಾ ಬ್ರಹ್ಮಾವರ, ತೃತೀಯ–ಅಪೂರ್ವ ಬ್ರಹ್ಮಾವರ

**ಶ್ರೀ ಗಣೇಶ ಪಂಚರತ್ನ (9 ರಿಂದ ಪದವಿ ಪೂರ್ವ ತನಕ) :** ಪ್ರಥಮ–ಚಿನ್ಮಯಿ ರಾವ್, ದೆಂದೂರುಕಟ್ಟೆ, ದ್ವಿತೀಯ–ಭಾಗ್ಯಶ್ರೀ, ಹೆಜಮಾಡಿ

**ಚೂರ್ಣಿಕೆ :** ಪ್ರಥಮ–ಮಲ್ಲಿಕಾರ್ಜುನ ಬೈಕಾಡಿ, ದ್ವಿತೀಯ–ಶರಣ್ಯ ಹೆಜಮಾಡಿ, ತೃತೀಯ–ಚಿನ್ಮಯಿ ರಾವ್, ದೆಂದೂರುಕಟ್ಟೆ

## ಕೃತಜ್ಞತಾರ್ಪಣೆ

ಉಡುಪಿಯ ಸ್ಥಾನಿಕ ಬ್ರಾಹ್ಮಣ ಸಂಘ (ರಿ) ಕುಂಜಿಬೆಟ್ಟು, ಉಡುಪಿ ಇದರ ವತಿಯಿಂದ ನಡೆದ ನವರಾತ್ರಿಯ ಮತ್ತು ವಿಜಯ ದಶಮಿಯಂದು ನಡೆದ ಎಲ್ಲಾ ಕಾರ್ಯಕ್ರಮಗಳೂ ಅತ್ಯಂತ ವ್ಯವಸ್ಥಿತವಾಗಿ ನಡೆದು ಸಮಾಜದ ಹಾಗೂ ದೇವಳಕ್ಕೆ ಬರುವ ಭಕ್ತ ಜನರ ಪ್ರಶಂಸೆಗೆ ಕಾರಣವಾಗಿದೆ. ಸಂಘವು ಕೇವಲ ವ್ಯವಸ್ಥೆ ಮಾತ್ರ ಮಾಡಬಹುದು. ಉಳಿದಂತೆ ಎಲ್ಲರ ಸಹಕಾರದಿಂದಲೇ ಈ ಕಾರ್ಯವು ಯಶಸ್ಸಿನ ಮೆಟ್ಟಲು ಏರಲು ಸಾಧ್ಯವಾಗಿದೆ. ಅದರಂತೆ ಶ್ರೀ ದುರ್ಗಾನಮಸ್ಕಾರ ಸೇವೆಯ ಧಾರ್ಮಿಕ ವಿಧಿಯನ್ನು ನಡೆಸಿಕೊಟ್ಟ ಶ್ರೀ ಸತೀಶ್ ಭಟ್, ಶ್ರೀ ದುರ್ಗಾ ನಮಸ್ಕಾರ ಸೇವೆ ಮತ್ತು ಇತರ ಸೇವೆಕೊಟ್ಟ ಭಕ್ತ ಬಾಂಧವರಿಗೆ, ಚಂಡಿಕಾಯಾಗದ ಪೌರೋಹಿತ್ಯ ನಡೆಸಿದ ಶ್ರೀ ಜಗದೀಶ್ ಉಪಾಧ್ಯಾಯ ಪಾವಂಜೆ ಮತ್ತು ಬಳಗಕ್ಕೆ, ಯಾಗದ ಕರ್ತೃ ಶ್ರೀ ಸಜೆ ಜನಾರ್ದನರಾವ್ ದಂಪತಿಗಳಿಗೆ, ಶ್ರೀ ದೇವಸ್ಥಾನದ ಅರ್ಚಕರಾದ ಶ್ರೀ ಧರಣೇಶ್ ಭಟ್‌ರವರಿಗೆ, ಬಹುಮಾನಗಳ ಪ್ರಾಯೋಜಕರಾದ ಶ್ರೀ ವೈ. ಭುವನೇಂದ್ರ ರಾವ್ ಹಾಗೂ ಶ್ರೀಮತಿ ಸುನಂದಾ ಸಿ.ಎಸ್.ರಾವ್‌ರವರಿಗೆ, ರಂಗವಲ್ಲಿಯ ಪ್ರಾಯೋಜಕರಾದ ಶ್ರೀ ಟಿ. ಜಗದೀಶ ರಾವ್‌ರವರಿಗೆ, ಶ್ರೀ ಶಾರದಾ ಮಂಟಪದ ಮೆನೇಜರ್ ಹಾಗೂ ಸಹಾಯಕ ಮೆನೇಜರ್ ಮತ್ತು ಸಿಬ್ಬಂದಿ ವರ್ಗಕ್ಕೆ, ಈ ದಿನಗಳಲ್ಲಿ ಸ್ವಯಂ ಪ್ರೇರಣೆಯಿಂದ ಸಾಂಸ್ಕೃತಿಕ ಕಾರ್ಯಕ್ರಮ ನೀಡಿದ ಕಲಾವಿದರೆಲ್ಲರಿಗೆ, ತಮ್ಮ ತಮ್ಮ ಕಾರ್ಯಗಳನ್ನು ಅತ್ಯಂತ ಯಶಸ್ವಿಯಾಗಿ ನಡೆಸಿಕೊಟ್ಟ ಸಂಘದ ವಿವಿಧ ವೇದಿಕೆಗಳ ಸಂಚಾಲಕರು, ಅಧ್ಯಕ್ಷರು ಮತ್ತು ಎಲ್ಲಾ ಸದಸ್ಯರಿಗೆ, ವಸ್ತು ಮತ್ತು ಧನ ರೂಪದಲ್ಲಿ ದೇಣಿಗೆ ನೀಡಿದ ಮಹನೀಯರೆಲ್ಲರಿಗೆ, ಅವಿರತವಾಗಿ ದುಡಿದ ಸಂಘದ ಎಲ್ಲಾ ಪದಾಧಿಕಾರಿಗಳಿಗೆ ಮತ್ತು ಎಲ್ಲಾ ನಿರ್ದೇಶಕರಿಗೆ, ಪ್ರತಿದಿನ ಆಗಮಿಸಿದ ಭಕ್ತ ಜನರಿಗೆ ಮತ್ತು ಸಮಾಜ ಬಾಂಧವರಿಗೆ, ಶ್ರೀಶಾರದಾ ಹವ್ಯಾಸಿ ಯಕ್ಷಗಾನ ಕಲಾವಿದರು ತಂಡಕ್ಕೆ, ಪ್ರತ್ಯಕ್ಷ ಪರೋಕ್ಷ ಸಹಕರಿಸಿದ ಎಲ್ಲರಿಗೂ ಸಂಘವು ಕೃತಜ್ಞತೆಯನ್ನು ಸಲ್ಲಿಸುತ್ತದೆ.

## ನವರಾತ್ರಿ ಸಂಬಂಧ ಜರಗಿದ ಸಾಂಸ್ಕೃತಿಕ ಕಾರ್ಯಕ್ರಮಗಳು

ದಿನಾಂಕ 29–09–2019 ರಿಂದ ಶಾರದಾ ದೇವಸ್ಥಾನದಲ್ಲಿ ನಡೆದ ನವರಾತ್ರಿ ಪೂಜೆಯ ಸಂದರ್ಭದಲ್ಲಿ ಪ್ರತೀ ನಿತ್ಯ ಸಂಜೆ ಘಂಟೆ 6.00 ರಿಂದ 8.00 ರ ತನಕ ಜರಗಿದ ಸಾಂಸ್ಕೃತಿಕ ಕಾರ್ಯಕ್ರಮಗಳು ಇಂತಿವೆ.

**29.09.2019**ರಂದು–ಯಕ್ಷಗಾನ ತಾಳಮದ್ದಳೆ "ಕರ್ಣಪರ್ವ" ಸಮಾಜ ಬಾಂಧವರಿಂದ

| | |
|---|---|
| **30.09.2019**ರಂದು–ಸುಗಮ ಸಂಗೀತ | ಶ್ರೀಮತಿ ವಾಸಂತಿ ಮತ್ತು ಬಳಗ, ಉಡುಪಿ ಇವರಿಂದ |
| **01.10.2019**ರಂದು–ಭಜನಾ ಕಾರ್ಯಕ್ರಮ | ಶ್ರೀ ಭಗವತಿ ದುರ್ಗಾಪರಮೇಶ್ವರಿ ಭಜನಾ ಮಂಡಳಿ, ಪುತ್ತೂರು ಇವರಿಂದ |
| ಭರತನಾಟ್ಯ | ಕು। ನಿಹಾರಿಕಾ ಮಯ್ಯ ಉಡುಪಿ ಇವರಿಂದ |
| **02.10.2019**ರಂದು–ಹರಿಕಥೆ ಸತ್ಯಹರಿಶ್ಚಂದ್ರ | ಶ್ರೀ ಮರೂರು ನಾರಾಯಣ ಹೆಬ್ಬಾರ್, ಉಡುಪಿ ಇವರಿಂದ |
| **03.10.2019**ರಂದು–ಭರತನಾಟ್ಯ | ಡಾ। ಭಾಗ್ಯಶ್ರೀ ಗುರುಪ್ರಸಾದ್, ಪಡುಬಿದ್ರೆ ಇವರಿಂದ |
| **04.10.2019**ರಂದು–ಭಕ್ತಿ ಸಂಗೀತ | ಡಾ। ವಿದ್ಯಾ ಎಸ್.ರಾವ್ ಮತ್ತು ಕು। ವೈ. ಮಾನಸ ರಾವ್, ಕುಕ್ಕಿಕಟ್ಟೆ, ಉಡುಪಿ ಇವರಿಂದ |
| **05.10.2019**ರಂದು–ಭಜನೆ | ಶ್ರೀ ಶಾರದಾ ಭಜನಾ ಮಂಡಳಿ, ಶಾರದಾ ಮಂಟಪ, ಉಡುಪಿ ಇವರಿಂದ |
| **06.10.2019**ರಂದು–ಹೂವಿನಕೋಲು | ಸಮಾಜಬಾಂಧವರಿಂದ |
| **07.10.2019**ರಂದು–ಸುಗಮ ಸಂಗೀತ | ಕು। ಶ್ರಾವ್ಯ ರವಿಶಂಕರ ಬೆಂಗಳೂರು ಇವರಿಂದ |

**08.10.2019**ರಂದು–ಸಂಜೆ ಮಹಿಳಾ ವೇದಿಕೆಯವರಿಂದ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮ ಜರಗಿತು. ಶ್ರೀಶಾರದಾ ಹವ್ಯಾಸಿ ಯಕ್ಷಗಾನ ಕಲಾವಿದರಿಂದ ಮಕ್ಕಳ ಯಕ್ಷಗಾನ "ಮೈಂದ ದ್ವಿವಿದ" ಹಾಗೂ ಹಿರಿಯ ಕಲಾವಿದರಿಂದ "ಮಹಾಮಂತ್ರಿ ದುಷ್ಟಬುದ್ಧಿ" (ಭಕ್ತ ಚಂದ್ರಹಾಸ) ಎಂಬ ಕಥಾನಕಗಳ ಯಕ್ಷಗಾನವು ಜರಗಿತು. ಪ್ರತೀ ನಿತ್ಯ ಸಂಜೆ ಶ್ರೀ ಶಾರದಾ ದೇವಳದಲ್ಲಿ ಶ್ರೀ ಸತೀಶ್ ಭಟ್, ಪಲಿಮಾರು ಇವರ ಪೌರೋಹಿತ್ಯದಲ್ಲಿ ಧಾರ್ಮಿಕ ಕಾರ್ಯಕ್ರಮವಾಗಿ ಶ್ರೀ ದುರ್ಗಾನಮಸ್ಕಾರ ಪೂಜೆಯು ಜರಗಿತು.

## ನವರಾತ್ರಿಯ ದುರ್ಗಾನಮಸ್ಕಾರ ಸೇವಾರ್ಥಿಗಳ ವಿವರ

ಶ್ರೀ ಸಂತೋಷ ರಾವ್ ಚಿಟ್ಪಾಡಿ, ಡಾ.ಸಂತೋಷ ರಾವ್ ಪದ್ಮನಾಭ ನಗರ, ಬಿ. ಹರಿಶ್ಚಂದ್ರ ರಾವ್, ಬಿ. ಸುರೇಶ್ ಶಾನುಭಾಗ್ ಇಂದ್ರಾಳಿ, ಸಿ. ಎಸ್. ರಾವ್ ಚಿಟ್ಪಾಡಿ, ಪಿ. ಬಿ. ರಾವ್ ಅಲೆವೂರು, ಯು. ಅರವಿಂದ ಕುಮಾರ, ಜಿ. ಕೆ. ಕೋಲ್ಪೆ, ಮಂಜುನಾಥ್ ಹೆಬ್ಬಾರ್, ಅಕ್ಷಯ್ ಮೋಹನ್ ರಾವ್, ಪ್ರದೀಪ್ ರಾವ್ ಕುವೈಟ್, ಬಿ. ಜಯರಾಮ್ ರಾವ್, ವಾದಿರಾಜ ರಾವ್ ಬನ್ನಂಜೆ, ವೈ.ವಿಠ್ಠಲ್ ರಾವ್ ಚಿಟ್ಪಾಡಿ, ಮ. ನಾ. ಹೆಬ್ಬಾರ್, ಕೆ. ಸುಧಾಕರ್ ರಾವ್, ಬ್ರಹ್ಮಾವರ ಕೃಷ್ಣಮೂರ್ತಿ ರಾವ್, ಎಸ್.ಎಂ.ರಾವ್, ಚಿಟ್ಪಾಡಿ ಸರ್ವಜ್ಞ ರಾವ್, ವೈ. ಭುವನೇಂದ್ರ ರಾವ್ ಕೊರಂಗ್ರಪಾಡಿ, ಡಾ। ಲೋಕೇಶ್ ರಾವ್, ಪ್ರಭಾಕರ ಭಂಡಿ, ಡಾ। ವೈ.ಎಸ್.ರಾವ್, ಯು.ಪ್ರಫುಲ್ಲಚಂದ್ರ ರಾವ್, ಉದಯ ರಾವ್ ಬ್ರಹ್ಮಾವರ, ದತ್ತಾತ್ರೇಯ ಮಾರ್ಪಳ್ಳಿ, ಕೆ. ಸುರೇಶ ರಾವ್ ಕುತ್ಪಾಡಿ, ಡಾ.ಸತೀಶ ರಾವ್, ವೈ.ಮುರಳೀಧರ ರಾವ್, ಕೃಷ್ಣಕುಮಾರ್ ರಾವ್, ಮಟ್ಟು

## ಸ್ಥಾನಿಕ ಬ್ರಾಹ್ಮಣ ಮಹಾಮಂಡಲ (ರಿ.) ಮಂಗಳೂರು

ಅಂತರಾಷ್ಟ್ರೀಯ ಮಟ್ಟದ ಸ್ಥಾನಿಕ ಸಂಘಗಳು ಮತ್ತು ಸಂಪನ್ಮೂಲ ವ್ಯಕ್ತಿಗಳ ಒಕ್ಕೂಟದ ವತಿಯಿಂದ

ಬೆಂಗಳೂರಿನ ಕೋಡಿಗೆಹಳ್ಳಿಯ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವಸ್ಥಾನದ ಸಾನಿಧ್ಯದಲ್ಲಿ

**ತಾ.11–01–2020 ಮತ್ತು ತಾ.12–01–2020ರಂದು**

**ವಿಶ್ವ ಸ್ಥಾನಿಕ ಬ್ರಾಹ್ಮಣ ಸಮಾವೇಶ–2020**

ಜರಗಲಿದೆ.

ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗಿಗಳಾಗಬೇಕಾಗಿ ವಿನಂತಿ.

**ಅಧ್ಯಕ್ಷರು ಹಾಗೂ ಪದಾಧಿಕಾರಿಗಳು**
ಅಖಿಲಭಾರತ ಸ್ಥಾನಿಕ ಬ್ರಾಹ್ಮಣ ಸಭಾ,
ಬೆಂಗಳೂರು

**ಅಧ್ಯಕ್ಷರು ಹಾಗೂ ಪದಾಧಿಕಾರಿಗಳು**
ಸ್ಥಾನಿಕ ಬ್ರಾಹ್ಮಣ ಮಹಾಮಂಡಲ (ರಿ),
ಮಂಗಳೂರು

*With Best Complimemts From*
SRI M. SHAILESH RAO
Ph : 9448624324
B.E., Civil
Civil Engineer & Contractor
SRI MALAVIKA ASSOCIATES
KALSANKA-UDUPI ROAD, UDUPI.
Website : shreemaalavikaassociates.com

# ಶ್ರೀ ಶಾರದಾ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ (ನಿ.) ಉಡುಪಿ ವಾರ್ಷಿಕ ಮಹಾಸಭೆ



ಶ್ರೀ ಶಾರದಾ ಕ್ರೆಡಿಟ್ ಕೋ.ಆಪರೇಟಿವ್ ಸೊಸೈಟಿ (ನಿ.) ಉಡುಪಿ ಇದರ 2018–19 ನೇ ಸಾಲಿನ ವಾರ್ಷಿಕ ಮಹಾಸಭೆಯು ತಾ.08.09.2019 ನೇ ರವಿವಾರ ಬೆಳಿಗ್ಗೆ ಭೂವರಾಹ ಸಂಕೀರ್ಣದ ಸಭಾಂಗಣದಲ್ಲಿ ನಡೆಯಿತು. ಸಂಘದ ಅಧ್ಯಕ್ಷರಾದ ಶ್ರೀ.ಕೆ. ವೇಣುಗೋಪಾಲ್‌ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆ ಶ್ರೀಮತಿ ಭಾರತಿಯವರ ಪ್ರಾರ್ಥನೆಯೊಂದಿಗೆ ಆರಂಭವಾಯಿತು.

ಸದಸ್ಯರನ್ನು ಆತ್ಮೀಯವಾಗಿ ಸ್ವಾಗತಿಸಿದ ಅಧ್ಯಕ್ಷರು “ಸತತವಾಗಿ 16 ನೇ ವರ್ಷದಲ್ಲಿ ಲಾಭಗಳಿಸುತ್ತಾ ಬಂದಿರುವ ಸಂಸ್ಥೆ, ಹದಿನೆಂಟು ವರ್ಷಗಳ ಸಾರ್ಥಕ ವ್ಯವಹಾರವನ್ನು ಪೂರ್ಣಗೊಳಿಸಿ 19 ನೇ ವರ್ಷಕ್ಕೆ ಪಾದಾರ್ಪಣೆ ಮಾಡಿದೆ. ಸಂಘವು ವರದಿ ಸಾಲಿನಲ್ಲಿ ಸದಸ್ಯರಿಂದ 25.73 ಲಕ್ಷ ಪಾಲು ಬಂಡವಾಳ, ಹಾಗೂ 18.02 ಕೋಟಿ ಠೇವಣಿ ಸಂಗ್ರಹಿಸಿದೆ. ಹಾಗೂ 14.43 ಕೋಟಿ ಸಾಲ ನೀಡಿದ್ದು, ರೂ. 32.82 ಲಕ್ಷ ನಿವ್ವಳ ಲಾಭಗಳಿಸಿದೆ. ಪ್ರಸಕ್ತ ಸಂಘವು ರೂ.20.23 ಕೋಟಿ ದುಡಿಯುವ ಬಂಡವಾಳ ಹೊಂದಿದ್ದು, ಸಂಘದ ಸದಸ್ಯರಿಗೆ ಶೇ.12% ಡಿವಿಡೆಂಡ್ ಘೋಷಿಸುತ್ತಿದ್ದೇವೆ. ಸಹಕಾರಿ ಸಂಘಗಳ ಬೆಳವಣಿಗೆಗೆ ಸದಸ್ಯರೇ ಮೂಲ ಕಾರಣ. ಸದಸ್ಯತ್ವ ವೃದ್ಧಿಸುವುದು ಸಂಘದ ಅಭಿವೃದ್ಧಿಯ ಸಂಕೇತ. ಸಂಘದ ಕ್ರಿಯಾಶೀಲತೆ ಹಾಗೂ ಪ್ರಗತಿಯ ಸಂಕೇತ ಠೇವಣಿಗಳು. ನಮ್ಮ ಎಲ್ಲಾ ಠೇವಣಿದಾರರ ತುಂಬು ಹೃದಯದ ಸಹಕಾರವನ್ನು ಸ್ವೀಕರಿಸಿ ಮುಂದೆಯೂ ಅವರ ಬೆಂಬಲ ಕೋರುತ್ತೇವೆ. ನಮ್ಮ ಈ ಸಂಸ್ಥೆಗೆ ನೀವು ಈ ತನಕ ನೀಡುತ್ತಾ ಬಂದಿರುವ ಬೆಂಬಲ, ಪ್ರೋತ್ಸಾಹ ಸಹಕಾರವೂ ಮುಂದಕ್ಕೂ ದೊರೆಯುತ್ತದೆಂಬ ಭರವಸೆ ನಮಗಿದೆ. ಈ ಸಂಘವು ನಡೆದು ಬಂದ ಹಾದಿಯಲ್ಲಿ ಮೈಗೂಡಿಸಿಕೊಂಡ ಸಹಕಾರಿ ಮೌಲ್ಯಗಳನ್ನು ಮುಂದುವರೆಸಿಕೊಂಡು ಹೋಗುತ್ತಾ, ಹಸನ್ಮುಖದ ಸೇವೆ ನಿಮಗೆ ಸತತ ದೊರೆಯಲಿದೆ ಎಂಬ ಭರವಸೆಯೊಂದಿಗೆ ನಿಮ್ಮೆಲ್ಲರನ್ನು ವಂದಿಸುತ್ತೇವೆ” ಎಂದರು.

2018–2019ನೇ ಸಾಲಿನ ವಾರ್ಷಿಕ ವರದಿ ಸಭೆಯಲ್ಲಿ ಅಂಗೀಕರಿಸಲ್ಪಟ್ಟ ನಂತರ, 2018–2019ನೇ ಸಾಲಿನ ಪರಿಶೋಧಿತ ಲೆಕ್ಕ ಪತ್ರಗಳನ್ನು ಕಾರ್ಯದರ್ಶಿ ಎನ್. ಪಟ್ಟಾಭಿರಾಮ ರಾವ್‌ರವರು ಸಭೆಯ ಮುಂದಿಟ್ಟರು. ಲೆಕ್ಕ ಪತ್ರಗಳನ್ನು ಪರಿಶೀಲಿಸಿದ ಸಭೆಯು ತನ್ನ ಅಂಗೀಕಾರವನ್ನು ನೀಡಿತು. 2018–19ನೇ ಸಾಲಿನ ನಿವ್ವಳ ಲಾಭದ ಹಂಚಿಕೆ, 2018–19ನೇ ಸಾಲಿನ ಅಂದಾಜು ಆಯ–ವ್ಯಯ ಪಟ್ಟಿಗಿಂತ ಹೆಚ್ಚಾದ ವೆಚ್ಚಗಳ ಪಟ್ಟಿಯನ್ನು ಮಹಾಸಭೆಯು ಅನುಮೋದಿಸಿತು.

2019–20ನೇ ಸಾಲಿನ ಅಂದಾಜು & ಅಯ ವ್ಯಯ ಪಟ್ಟಿಯನ್ನು ಮಹಾಸಭೆಯು ಅನುಮೋದಿಸಿತು. ಲೆಕ್ಕ ಪರಿಶೋಧಕರ ಮಾನ್ಯತೆ ಪಟ್ಟಿಗೆ ಅನುಪಾಲನ ವರದಿಯನ್ನು ಮಹಾಸಭೆಯ ಮುಂದಿಡಲಾಯಿತು. 2019–20ನೇ ಸಾಲಿಗೆ ಲೆಕ್ಕ ಪರಿಶೋಧಕರನ್ನಾಗಿ ಶ್ರೀ ರಮೇಶ್ ರಾವ್ ಮತ್ತು ಎಸೋಸಿಯೇಟ್ಸ್, ಸನ್ನದು ಲೆಕ್ಕ ಪರಿಶೋಧಕರು, ಕಾರ್ಕಳ ಇವರನ್ನು ನೇಮಕ ಮಾಡಿಕೊಳ್ಳುವ ಪ್ರಸ್ತಾಪವನ್ನು ಮಹಾಸಭೆಯು ಅಂಗೀಕರಿಸಿತು.

ವೇದಿಕೆಯಲ್ಲಿ ಉಪಾಧ್ಯಕ್ಷರಾದ ಯು. ಅರವಿಂದ ಕುಮಾರ್ ಹಾಗೂ ನಿರ್ದೇಶಕರಾದ ಯು. ಪ್ರಫುಲ್‌ಚಂದ್ರ ರಾವ್, ಎಮ್. ಸದಾನಂದರಾವ್, ವೈ. ಪ್ರಕಾಶ್ ರಾವ್, ವೈ. ಮೋಹನ್‌ರಾವ್, ಕೆ. ಮಂಜುನಾಥ್ ಹೆಬ್ಬಾರ್, ಬಿ. ಜಯರಾವ್ ರಾವ್, ಕೃಷ್ಣಕುಮಾರ್ ರಾವ್, ಕೆ.ಗಣೇಶ್ ರಾವ್, ಪಿ.ಪ್ರಭಾಕರ್ ಭಂಡಿ, ವೈ. ಮುರಳೀಕೃಷ್ಣ ರಾವ್, ಹರಿಣಾಕ್ಷಿ ಎನ್. ರಾವ್, ಪ್ರೀತಿ ಸಂತೋಷ್ ರಾವ್ ಹಾಗೂ ಸಲಹೆಗಾರರಾದ ಬಿ. ಕೃಷ್ಣಮೂರ್ತಿ ರಾವ್ ಉಪಸ್ಥಿತರಿದ್ದರು.

ಶಾಖಾ ವ್ಯವಸ್ಥಾಪಕರಾದ ಕೆ.ವಿಶ್ವನಾಥ ರಾವ್‌ರವರ ಧನ್ಯವಾದ ಸಮರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು. ಕೊನೆಯಲ್ಲಿ ಸದಸ್ಯರೆಲ್ಲರೂ ಮಧ್ಯಾಹ್ನದ ಭೋಜನವನ್ನು ಸ್ವೀಕರಿಸಿದರು.

Ph : 98459 92859
Ganesh Hebbar & Associates
CHARTERED ACCOUNTANT
S.M.S.P. Complex, Udupi - 576 101.

Buying and selling shares as easy as checking your emails
Sharekhan Online Trading Account Features:
- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com
Sharekhan
YOUR GUIDE TO THE FINANCIAL JUNGLE
Visit : www.sharekhan.com
Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142): for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do 's & Don'ts by NCDEX. (Subbroker Regn.Nos: BSE: INS010606122;NSE: INS23106924)

# ಶ್ರೀ ಶಾರದಾ ದೇವಸ್ಥಾನ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ

## ಈ ತಿಂಗಳ ಕಾರ್ಯಕ್ರಮಗಳು

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30ಕ್ಕೆ

ಪ್ರತಿ ಮಂಗಳವಾರ : ಸೌಂದರ್ಯಲಹರಿ ಪಾರಾಯಣ ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಶುಕ್ರವಾರ : ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ ‘‘ಪಾರಾಯಣ’’ ಸಂಜೆ ಗಂಟೆ 4-30ರಿಂದ

**ತಾ.17-10-2019 ಮತ್ತು ತಾ.15-11-2019 ಸಂಕಷ್ಟಹರ ಚತುರ್ಥಿಯಂದು ‘‘ಸಾಮೂಹಿಕ ಗಣಹೋಮ’’ ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

**ತಾ.01-11-2019 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ತಾ.18-10-2019 ಮತ್ತು ತಾ.01-11-2019 ಪಂಚಮಿಯಂದು ‘‘ನಾಗದೇವರಿಗೆ ತನುಸೇವೆ’’ ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

## ನವಂಬರ್ ತಿಂಗಳ ಶಾಶ್ವತ ಸೇವಾಕರ್ತರ ವಿವರ

| | |
|---|---|
| 1. ಶ್ರೀಮತಿ ಸುಶೀಲಾ ಬಿ.ಅಣ್ಣಾಜಿ, ಕುಂಜಿಬೆಟ್ಟು | 16. ಪಿ. ರಾಧಾಕೃಷ್ಣ ರಾವ್, ಮುಂಬೈ |
| 2. ಕೆ. ಮೋಹನ್ ರಾವ್, ಅಡ್ಕದಕಟ್ಟೆ | 17. ಕೆ. ಜಯಂತ್, ಬೆಂಗಳೂರು |
| 3. ವೈ. ಮುರಳೀಕೃಷ್ಣ ರಾವ್, ಇಂದ್ರಾಳಿ | 18. ಸರಸ್ವತಿ. ಪಿ. ಆಚಾರ್ಯ, ಕುಂಜಿಬೆಟ್ಟು |
| 4. ಡಿ.ನಾರಾಯಣ ರಾವ್, ಧರ್ಮಸ್ಥಳ | 19. ಶಶಿಧರ್ ರಾವ್ ಕೋಲ್ಪೆ. ಕಾರ್ಕಳ |
| 5. ಕೆ. ಸುರೇಶ್ ರಾವ್ ಮತ್ತು ಶ್ರೀಮತಿ ನಾಗವಲ್ಲಿ ರಾವ್, ಕುತ್ಪಾಡಿ | 20. ಪ್ರಿಯ.ಎ. ರಾವ್, |
| | 21. ಮಿಸ್ಟರ್ ನೂತನ್ ಶಂಕರ್, ಹೈದರಾಬಾದ್ |
| 6. ಶ್ರೀಮತಿ ಲಲಿತ ಎಮ್. ಶೆಟ್ಟಿ, ಬೆಂಗಳೂರು | 22. ಪುರುಷೋತ್ತಮ ನಾಯಕ್, ಮಂಗಳೂರು |
| 7. ಕೆ.ಕೃಷ್ಣ ಭಟ್, ಕುಕ್ಕಿಕಟ್ಟೆ | 23. ಪಿ. ಭಾಸ್ಕರ್ ಶರ್ಮ, ನಾಗಪುರ |
| 8. ರಾಜೀವ್ ಲಾಲ್, ಮುಂಬೈ | 24. ಬಿ. ನಾರಾಯಣ ರಾವ್, ಉಡುಪಿ |
| 9. ಶ್ರೀಮತಿ ಅನುಷ, ಮುಂಬೈ | 25. ಪಿ.ಕೃಷ್ಣ ರಾವ್, ಅಹಮ್ಮದ್‌ನಗರ |
| 10. ಶ್ರೀಮತಿ ಲಲಿತ. ಎಮ್.ಶೆಟ್ಟಿ, ಬೆಂಗಳೂರು | 26. ಡಾ.ವಿ. ಶಂಕರ್, ಹೈದರಾಬಾದ್ |
| 11. ಪೂಜಾ, ನಂದಿಕೂರು | 27. ಕುಮಾರಿ ಶರಣ್ಯ, ಸಿದ್ಧಾಪುರ |
| 12. ಎಮ್. ಶ್ರೀಕಾಂತ್ ರಾವ್, ಮಾರ್ಗೋ | 28. ರವಿ ಪ್ರಕಾಶ್, ಪಡುಬಿದ್ರಿ |
| 13. ಪಿ. ಗೌರೀಶ್, ಮಣಿಪಾಲ | 29. ಡಾ.ವಿ. ಶಂಕರ್ ಮತ್ತು ಮಿಸ್ಟರ್ ನೂತನ್, ಹೈದರಾಬಾದ್ |
| 14. ಡಾ। ಐ.ಕೆ ಶಿವರಾಮ ರಾವ್, ಕುಂಜಿಬೆಟ್ಟು | |
| 15. ಕೆ. ವಿಠ್ಠಲ್‌ದಾಸ್ ಪೈ, ಕುಂಜಿಬೆಟ್ಟು | 30. ಪಿ. ರವಿಕಲಾ ರಾವ್, ವಿದ್ಯಾರತ್ನನಗರ |

## ತುಲಾ ಮಾಸದ ವಿಶೇಷ ದಿನಗಳು

| | | | |
|---|---|---|---|
| 14–10–2019 | ಶರದೃತು, ಆಶ್ವಯುಜ ಮಾಸದ ಕೃಷ್ಣಪಕ್ಷಾರಂಭ | 29–10–2019 | ಶರದೃತು, ಕಾರ್ತೀಕ ಮಾಸದ ಶುಕ್ಲಪಕ್ಷಾರಂಭ, ಅಂಗಡಿ ಪೂಜೆ |
| 17–10–2019 | ತುಲಾ ಸಂಕ್ರಮಣ ಸಂಕಷ್ಟಹರ ಚತುರ್ಥಿ ಚಂದ್ರೋದಯ ರಾತ್ರಿ 8–50ಕ್ಕೆ | 08–11–2019 | ಸರ್ವೈಕಾದಶಿ |
| | | 09–11–2019 | ಉತ್ಥಾನ ದ್ವಾದಶೀ, ತುಲಸೀ ಪೂಜೆ, ಉಡುಪಿ ಶ್ರೀಕೃಷ್ಣ ಲಕ್ಷದೀಪೋತ್ಸವ ಆರಂಭ |
| 24–10–2019 | ಸರ್ವೈಕಾದಶಿ | | |
| 26–10–2019 | ಸಾಯಂ ಜಲಪೂರಣಂ | 12–11–2019 | ಹುಣ್ಣಿಮೆ, ಉಡುಪಿ ಶ್ರೀಕೃಷ್ಣ ಲಕ್ಷದೀಪೋತ್ಸವ ಸಮಾಪ್ತಿ |
| 27–10–2019 | ಪ್ರಾತ:ಕಾಲೇ ತೈಲಾಭ್ಯಂಗ: ಸಮಯ ಬೆಳಿಗ್ಗೆ 5–22 ನರಕ ಚತುರ್ದಶಿ, ಯಮತರ್ಪಣ ಲಕ್ಷ್ಮೀಪೂಜೆ, ಬಲೀಂದ್ರ ಪೂಜೆ | 13–11–2019 | ಶರದೃತು, ಕಾರ್ತೀಕ ಮಾಸದ ಕೃಷ್ಣಪಕ್ಷಾರಂಭ |
| | | 15–11–2019 | ಸಂಕಷ್ಟಹರ ಚತುರ್ಥಿ ಚಂದ್ರೋದಯ ರಾತ್ರಿ 8–27ಕ್ಕೆ |
| 28–10–2019 | ಅಮಾವಾಸ್ಯೆ, ಗೋಪೂಜೆ, ತುಲಸೀ ಪೂಜಾರಂಭ | 16–11–2019 | ವೃಶ್ಚಿಕ ಸಂಕ್ರಮಣ |

SAMPATH KUMAR Mobile : 9741508881
TRISHULINI TOURIST
*The Tourist People*
Near Mahishamardhini Temple, Bailur, Udupi.
ALL TYPES OF VEHICLES AVAILABLE FOR HIRE

RAJESH POWER PRESS
PRINTERS & PUBLISHERS
DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com
QUALITY FIRST AND ALWAYS


ಎಮ್. ದೇವಾನಂದ್ ಭಟ್
Cell : 9845644556
9483913344
ಶೋಭಾ ಡಿಜಿಟಲ್
ಸ್ಟುಡಿಯೋ & ವೀಡಿಯೊ
ಬೆಳ್ವಾಯಿ–574213 (08258)-276177 (O)
ಮೂಡಬಿದ್ರಿ, ಲಾವಂತ ಕಾಂಪ್ಲೆಕ್ಸ್ 9901995655
ಎಡಪದವು – 574 164 (0824)-2256374 (O) ಮಂಗಳೂರು, ದ.ಕ.
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

## ಸುರತ್ಕಲ್ ಸಂಘದಿಂದ ಶೃಂಗೇರಿ ಜಗದ್ಗುರುಗಳ ದರ್ಶನ



ದಿನಾಂಕ 25.08.2019 ನೇ ರವಿವಾರ ದಂದು ನಮ್ಮ ಸಂಘದ ಸಮಾಜ ಬಾಂಧವರೆಲ್ಲರೂ ಉಪಾಧ್ಯಕ್ಷರಾದ ಶ್ರೀ ವಾಸುದೇವ ಶಾನುಭಾಗ್ ಹಾಗೂ ಶ್ರೀ ಗೋಪಾಲಕೃಷ್ಣ ಮತ್ತು ಯುವ ವೇದಿಕೆಯ ಸದಸ್ಯರ ನೇತೃತ್ವದಲ್ಲಿ ಚಾತುರ್ಮಾಸ ನಿರತ ಶೃಂಗೇರಿ ಜಗದ್ಗುರುಗಳ ದರ್ಶನ ಗೈಯಲು ಹೊರಟರು. ಆ ದಿನ ಬೆಳಗ್ಗೆ 6.45 ಕ್ಕೆ ಸರಿಯಾಗಿ ಸುಮಾರು 66 ಮಂದಿ ಸದಸ್ಯರು ಸುರತ್ಕಲ್‌ನಿಂದ ಹೊರಟು 9.30 ಕ್ಕೆ ಸರಿಯಾಗಿ ಬಜಗೋಳಿಗೆ ಬಂದು ನಮ್ಮವರೇ ಆದ ಶ್ರೀ ಉಮೇಶ್ ರಾವ್ ಇವರ ಮನೆಯಲ್ಲಿ ಪ್ರವೀಣ್ ಕುಮಾರ್ ಬಳಗದವರು ತಯಾರಿಸಿ ತಂದಿರುವ ಉಪಹಾರವನ್ನು ಮಾಡಿ ಮನೆಯವರಿಗೆ ಮನಪೂರ್ವಕವಾದ ಧನ್ಯವಾದಗಳನ್ನು ಅರ್ಪಿಸಿ ಶೃಂಗೇರಿಗೆ ಪ್ರಯಾಣವನ್ನು ಬೆಳೆಸಿದೆವು. 11.30 ಕ್ಕೆ ಸರಿಯಾಗಿ ಶೃಂಗೇರಿಗೆ ತಲುಪಿ ಪ್ರತಿಯೊಂದು ಸಂಘಗಳಿಗೂ ಕಾದಿರಿಸಿದ ಕೊಠಡಿಗೆ ತೆರಳಿ ಕೈಕಾಲು ಮುಖ ತೊಳೆದುಕೊಂಡು ಎಲ್ಲರೂ ಒಟ್ಟಾಗಿ ಶೃಂಗೇರಿ ಶಾರದಾಂಬೆಯ ದರ್ಶನ ಮಾಡಿ ಪ್ರಸಾದ ಸ್ವೀಕರಿಸಿ ಗುರುಗಳ ದರ್ಶನಕ್ಕಾಗಿ ನರಸಿಂಹ ವನಕ್ಕೆ ತೆರಳಿದೆವು. ಸರತಿಯ ಸಾಲಿನಂತೆ ಸಮಾಜ ಬಾಂಧವರೆಲ್ಲರೂ ಗುರುಗಳ ಭೇಟಿಯನ್ನು ಮಾಡಿ ಮಂತ್ರಾಕ್ಷತೆಯನ್ನು ಪಡೆದು ಸಂಘದ ವತಿಯಿಂದ ಪಾದಪೂಜೆಯನ್ನು ಮಾಡಿಸಲಾಯಿತು. ಆಮೇಲೆ 12.30ಕ್ಕೆ ಸರಿಯಾಗಿ ಜಗದ್ಗುರುಗಳಾದ ಶ್ರೀ ಶ್ರೀ ಶ್ರೀ ವಿಧುಶೇಖರ ತೀರ್ಥರು ನೆರೆದಿದ್ದ ಸಮಾಜ ಬಾಂಧವರಿಗೆ ಆಶೀರ್ವಚನವನ್ನು ಮಾಡಿದರು.

ನಂತರ ಎಲ್ಲರೂ ನೇರವಾಗಿ ಅನ್ನಪೂರ್ಣ ಸಭಾಂಗಣಕ್ಕೆ ತೆರಳಿ ಪ್ರಸಾದ ಭೋಜನವನ್ನು ಸ್ವೀಕರಿಸಿದೆವು. ಮಧ್ಯಾಹ್ನ 3.00ಕ್ಕೆ ಸರಿಯಾಗಿ ಸ್ಥಳೀಯ ಹೋಟೆಲಿನಿಂದ ಬನ್ಸ್ ಹಾಗೂ ಚಾ, ಕಾಫಿಯನ್ನು ಪಡೆದುಕೊಂಡು ಶೃಂಗೇರಿಯಿಂದ ಸುರತ್ಕಲ್‌ಗೆ ಪ್ರಯಾಣವನ್ನು ಬೆಳೆಸಿದೆವು. ಪ್ರಯಾಣದ ದಾರಿ ಮಧ್ಯೆ ಎಲ್ಲರಿಗೂ ಚಾ, ಕಾಫಿ ಹಾಗೂ ಬನ್ಸ್‌ನ್ನು ನೀಡಲಾಯಿತು. ಲಘು ಉಪಾಹಾರದ ಬಳಿಕ ಪುನ: ಪ್ರಯಾಣ ಮುಂದುವರಿಸಿ ಸಂಜೆ ಸುಮಾರು 6.30ಕ್ಕೆ ಸರಿಯಾಗಿ ಸುರತ್ಕಲ್ ತಲುಪಿ ಎಲ್ಲರೂ ಅವರವರ ಮನೆಗೆ ತೆರಳಿದೆವು.

## ಅಜಿತ್ ರಾವ್‌ರವರಿಗೆ ಅಭಿನಂದನೆ



ಹಸುಗಳ ಸಾಕುವಿಕೆ ಮತ್ತು ಹೈನುಗಾರಿಕೆಯಲ್ಲಿ ಬೈಲೂರು ಆಸುಪಾಸಿನಲ್ಲಿ ಪ್ರಸಿದ್ಧರಾಗಿದ್ದ ಕೀ। ಶೇ। ವನಜಾಕ್ಷಿಯಮ್ಮ ಅವರ ಮಗಳು ಶ್ರೀಮತಿ ಗೀತಾರವರು ಹೈನುಗಾರಿಕಾ ವೃತ್ತಿಯನ್ನೇ ಮುಂದುವರೆಸಿಕೊಂಡು ಬಂದಿದ್ದು, ಅವರ ಪುತ್ರ ಬೈಲೂರಿನ ಶ್ರೀ ಅಜಿತ್ ರಾವ್ ಇವರು ಹಸುಗಳನ್ನು ಸ್ವತಃ ಸಾಕಿ, ಹಾಲು ಕರೆದು ಸೊಸೈಟಿಗೆ ಹಾಲು ಕೊಟ್ಟು ಪ್ರಸಿದ್ಧರಾಗಿದ್ದಾರೆ. 2018-19ನೇ ಸಾಲಿನಲ್ಲಿ ಅತ್ಯಂತ ಗುಣಮಟ್ಟದ ಮತ್ತು ಹೆಚ್ಚಿನ ಪ್ರಮಾಣದ ಹಾಲನ್ನು 'ಉದ್ಯಾವರ' ಹಾಲಿನ ಡೈರಿಗೆ ಸರಬರಾಜು ಮಾಡಿದ ಬಗ್ಗೆ ಸೊಸೈಟಿಯಲ್ಲಿ ಮೊನ್ನೆ ನಡೆದ ವಾರ್ಷಿಕ ಸಮಾವೇಶದಲ್ಲಿ ಸೊಸೈಟಿಯಿಂದ ಸಮ್ಮಾನಿಸಲ್ಪಟ್ಟಿರುವರು. ಈ ಬಗ್ಗೆ ಅವರಿಗೆ ಹಾರ್ದಿಕ ಅಭಿನಂದನೆಗಳು.


ಶ್ರೀಮತಿ ಮತ್ತು ಶ್ರೀ ಉದಯಚಂದ್ರ ರಾವ್ ನಂದಳಿಕೆ


**ಯೆಶಸ್ವೀ ಎಂಟರ್‌ಪ್ರೈಸೆಸ್**

ಶಾಂಭವಿ ಹೈಟ್ಸ್, ಸೈಂಟ್‌ಮೇರಿಸ್ ಕಾಲೇಜು ಎದುರು, ಮುಖ್ಯರಸ್ತೆ, ಶಿರ್ವ - 574 116.
ಇ-ಮೇಲ್ : udayarao42@gmail.com

Z Gift Item Z Stationary Z Xerox Z Lamination
Z Spiral Binding Z Mobile & DTC Recharge Z Tours & Travels
Z Courier Service Z Sports Items & Toys Z Ice Creams



ಬಳಸಿದ ಕಾರುಗಳ ಮಾರಾಟ ಮತ್ತು ಖರೀದಿಗಾಗಿ ನಮ್ಮನ್ನು ಸಂಪರ್ಕಿಸಿ :
ಸೂಕ್ತ ಬೆಲೆಯೊಂದಿಗೆ ಉತ್ತಮ ಸೇವೆ ಲಭ್ಯ.




**N. Laxmi Prasad**



ಕಾರ್ಯಕಾರಿಣಿ ಮಂಡಳಿ ಸದಸ್ಯರು
**D. K. District Used Vehicle Dealers & Agents Association (R.), Mangalore**
Flat No. 103, Deepa Residency, Near Preethi Apartment
Kodiyalguttu West, Kodiyalbail, MANGALORE - 575 003
Mob. : 9845644489, 9964236997 E-mail : laxmiprasad5010@gmail.com


## 'ಮಾರ್ಪಳ್ಳಿಯವರ ಪುಸ್ತಕ ಬಿಡುಗಡೆ ಮತ್ತು ಪ್ರವಚನ'



ಶ್ರೀ ಮಾರ್ಪಳ್ಳಿ ಆರ್.ಮಂಜುನಾಥ ಇವರು ಬರೆದ "ಗಣೇಶನ ಜನನ ನಾನಾ ಕಥನ" ಎಂಬ ಕೃತಿಯನ್ನು ದಿನಾಂಕ 14-09-2019 ರಂದು ಬೆಂಗಳೂರಿನ ಕವಿಪ್ರನಿನಿ ಲೆಕ್ಕಾಧಿಕಾರಿಗಳ ಸಂಘ ಇವರ ನೇತೃತ್ವದಲ್ಲಿ ಬೆಂಗಳೂರಿನ ಕೆ.ಇ.ಬಿ. ಇಂಜಿನಿಯರುಗಳ ಸಂಘ ಆನಂದರಾವ್ ವೃತ್ತದ ಸಭಾಂಗಣದಲ್ಲಿ ಬಿಡುಗಡೆಗೊಳಿಸಲಾಯಿತು. ಕಾರ್ಯಕ್ರಮವು ಶ್ರೀಮತಿ ವಿದುಷಿ ನವ್ಯಾ ಪ್ರಮೋದ್ ಇವರ ಪ್ರಾರ್ಥನೆಯಿಂದ ಆರಂಭವಾಯಿತು. ಕೃತಿಯನ್ನು ಕರ್ನಾಟಕ ಎಲೆಕ್ಟ್ರಿಸಿಟಿ ರೆಗ್ಯುಲೇಟರ್ ಕಮಿಷನ್ನಿನ ಡೈರೆಕ್ಟರ್ ಹಾಗೂ ಕೆ.ಪಿ.ಟಿ.ಸಿ.ಎಲ್ ನ ಫೈನಾನ್ಸ್ ಅಡ್ವೈಸರ್ ಆಗಿದ್ದ ಶ್ರೀಯುತ ವಿ.ಜಿ. ಪಂಡಿತ್ ಇವರು ಬಿಡುಗಡೆ ಮಾಡಿ ಲೇಖಕರಿಗೆ ಶುಭ ಹಾರೈಸಿದರು. ನಂತರ ಶ್ರೀ ಮಾರ್ಪಳ್ಳಿ ಆರ್.ಮಂಜುನಾಥ್ ಇವರು "ಗಣೇಶ ನಮಗೆಷ್ಟು ನಿಕಟ" ಎನ್ನುವ ಬಗ್ಗೆ ಪ್ರವಚನವನ್ನು ನೀಡಿದರು. ಕಾರ್ಯಕ್ರಮದ ನಿರೂಪಣೆಯನ್ನು ನಿವೃತ್ತ ಕೆ.ಪಿ.ಟಿ.ಸಿ.ಎಲ್.ನ ಅಕೌಂಟ್ಸ್ ಆಫೀಸರ್ ಆಗಿದ್ದ ಶ್ರೀ ವಿ.ಜಿ. ಗಾಯತ್ರಿಯವರು ನಿರ್ವಹಿಸಿದರು.

## ಬಾರ್ಕೂರು ಮಾಸ್ತಿ ಅಮ್ಮ ದೇವಸ್ಥಾನದಲ್ಲಿ ಪ್ರತಿಭಾ ಪುರಸ್ಕಾರ



ಬಾರಕೂರು ಧರ್ಮಶಾಲೆ ಶ್ರೀ ಮಾಸ್ತಿ ಅಮ್ಮನವರ ದೇವಸ್ಥಾನದ ವಠಾರದಲ್ಲಿ ಶ್ರೀ ಮಾಸ್ತಿದುರ್ಗಾ ಚಿಣ್ಣರ ಬಳಗದ ಮಕ್ಕಳಿಗೆ 14ನೇ ವರ್ಷದ ಅರ್ಚಕರು ಕೊಡಮಾಡುವ ದಿ. ಲಕ್ಷ್ಮೀನಾರಾಯಣಯ್ಯ ದತ್ತಿನಿಧಿ ಹಾಗೂ ಪ್ರತಿಭಾ ಪುರಸ್ಕಾರವನ್ನು ವಿತರಿಸಲಾಯಿತು. ಮುಖ್ಯ ಅತಿಥಿಗಳಾಗಿದ್ದ ಹೇರಾಡಿ ರುಕ್ಮಿಣಿ ಶೆಟ್ಟಿ ಸ್ಮಾರಕ ನ್ಯಾಶನಲ್ ಖಾಸಗಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯಿನಿ ಗೌರಿ.ಎಸ್.ರಾವ್ ಮಾತನಾಡಿ ಪ್ರತಿದಿನ ಭಜನೆ ಮಾಡುವುದರಿಂದ, ಅದರಲ್ಲೂ ವಿದ್ಯಾರ್ಥಿಗಳು ತಪ್ಪದೆ ಭಜನೆ ಮಾಡುವುದರಿಂದ ಶಾಲೆಯಲ್ಲಿ ಅಂಕ ಗಳಿಸುವುದರೊಂದಿಗೆ ಅವರಲ್ಲಿನ ಅಂತರಂಗದ ಬೆಳವಣಿಗೆಯೂ ಸಾಧ್ಯ ಹಾಗೂ ಆತ್ಮಶಕ್ತಿಯ ಉನ್ನತಿಗೆ ಭಜನೆಯೇ ಮೂಲ ಕಾರಣ ಎಂದು ಹೇಳಿದರು. ನಮ್ಮಲ್ಲಿನ ಮಾನವೀಯ ಮೌಲ್ಯದ ಬೆಳವಣಿಗೆಯಾದರೇ ಮಾತ್ರ ಮಾನವನಾಗಿ ಮನುಷ್ಯತ್ವ ಉಳಿಸಿಕೊಳ್ಳಲು ಭಜನೆಯಂತಹ ಭಾರತೀಯ ಸಾಂಸ್ಕೃತಿಕ ಕಲೆಗಳು ಸಹಕಾರ ಎಂದು ಹಿತವಚನ ನುಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಕಾರ್ಪೊರೇಶನ್ ಬ್ಯಾಂಕ್ ನಿವೃತ್ತ ಉದ್ಯೋಗಿ ಸೋಮೇಶ್ವರ ರಾವ್ ಮಕ್ಕಳಿಗೆ ಶುಭ ಹಾರೈಸಿದರು. ಚಿಣ್ಣರ ಬಳಗದ ಅಧ್ಯಕ್ಷ ಅನಂತ ಪದ್ಮನಾಭ ಭಟ್ ಸ್ವಾಗತಿಸಿ ಕಾರ್ಯಕ್ರಮ ನಿರ್ವಹಿಸಿದರು. ಚಿಣ್ಣರ ಬಳಗದ ನಿರ್ದೇಶಕ ರಾಘವೇಂದ್ರ ರಾವ್ ಧನ್ಯವಾದವಿತ್ತರು. ದೇವಸ್ಥಾನದ ಆಡಳಿತ ಸಮಿತಿ ಸದಸ್ಯ ಸುರೇಶ್ ಸುಭಾನು, ನಾಗರಾಜ ರಾವ್ ಕೂಡ್ಲಿ ಮತ್ತಿತರರು ಉಪಸ್ಥಿತರಿದ್ದರು. ಅನಂತರ ಮಕ್ಕಳಿಂದ ವಿಶೇಷ ಭಜನೆ ಜರುಗಿತು.

## ಬೆಳ್ತಂಗಡಿಯಲ್ಲಿ ಋಗುಪಾಕರ್ಮ

ತಾ.11-09-2019ರಂದು ಬೆಳ್ತಂಗಡಿ ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಸಭಾದ ವತಿಯಿಂದ ಲಾಯಿಲದಲ್ಲಿನ ಸಭಾಭವನದಲ್ಲಿ ಋಗುಪಾಕರ್ಮವನ್ನು ಆಚರಿಸಲಾಯಿತು. ಸುಮಾರು 60ಜನ ಸಮಾಜಬಾಂಧವರು ಭಾಗವಹಿಸಿ ನೂತನ ಯಜ್ಞೋಪವೀತ ಧಾರಣೆ ಮಾಡಿದರು


ಶುಭಾಶಯಗಳೊಂದಿಗೆ

**ಹೆಬ್ಬಾರ್ ಎಂಟರ್‌ಪ್ರೈಸಸ್**

ವೈಷ್ಣವಿ ಬಿಲ್ಡಿಂಗ್, ವಾದಿರಾಜ ರಸ್ತೆ, ಉಡುಪಿ-576101.

ನಮ್ಮಲ್ಲಿ ಶುಭ ಸಮಾರಂಭಗಳಿಗೆ ಬೇಕಾಗುವ ಶಾಮಿಯಾನ, ಕುರ್ಚಿ,
ಟೇಬಲ್, ಪಾತ್ರೆ, ಅಡುಗೆ ಹಾಗೂ ಕ್ಯಾಟರಿಂಗ್ ವ್ಯವಸ್ಥೆ ಲಭ್ಯವಿದೆ.

ಪ್ರೊ : ಮಂಜುನಾಥ ಹೆಬ್ಬಾರ್ ಸಂಪರ್ಕ ಸಂಖ್ಯೆ 9611099894

## ಶ್ರೀ ಶಾರದಾ ಭಜನಾ ಮಂಡಳಿಯ ನವರಾತ್ರಿ ಕಾರ್ಯಕ್ರಮ



ಶ್ರೀ ಶಾರದಾ ಭಜನಾಮಂಡಳಿ ಉಡುಪಿಯವರು ಈ ವರ್ಷದ ನವರಾತ್ರಿಯಲ್ಲಿ ಕೊಲ್ಲೂರು ಮೂಕಾಂಬಿಕಾ ದೇವಸ್ಥಾನ, ನೀಲಾವರ ಮಹಿಷಮರ್ಧಿನಿ, ಅಂಬಲ್ಪಾಡಿ ಮಹಾಕಾಳಿ, ಇಂದ್ರಾಳಿ ಕಾಮಾಕ್ಷಿ ದೇವಸ್ಥಾನ, ಮುಂಡ್ಕೂರು ಅನ್ನ ಪೂರ್ಣೇಶ್ವರಿ, ಮಟಂತಬೆಟ್ಟು ರಾಜರಾಜೇಶ್ವರಿ, ಉಡುಪಿ ಶ್ರೀ ಕೃಷ್ಣ ದೇವಸ್ಥಾನಗಳಲ್ಲಿ ಭಜನಾ ಕಾರ್ಯಕ್ರಮ ನೆರವೇರಿಸಿದರು.

## ಶ್ರೀ ಶಾರದಾ ಮಂಟಪಕ್ಕೆ ನೂತನ ಸ್ವಾಗತ ಮಂಟಪ



ಶ್ರೀ ಶಾರದಾ ಮಂಟಪದ ನೂತನ ಸ್ವಾಗತ ಮಂಟಪವನ್ನು ತಾ.14-09-2019ರಂದು ಶ್ರೀ ಪಾಲಚಂದ್ರ ರಾವ್ ಹಾಗೂ ಶ್ರೀ ಎಸ್.ಎಮ್.ರಾವ್ ಉದ್ಘಾಟಿಸಿದರು. ಸಂಘದ ಅಧ್ಯಕ್ಷರು, ಪದಾಧಿಕಾರಿಗಳು ಹಾಗೂ ಸಮಾಜಬಾಂಧವರು ಉಪಸ್ಥಿತರಿದ್ದರು.

### ಶುಭ ಜನನ

ಬೆಂಗಳೂರಿನಲ್ಲಿ ನೆಲೆಸಿರುವ ಶ್ರೀ ಹೇಮಂತ್ (ನಟ್ಟೋಜಿ ಕುಟುಂಬದ ಶ್ರೀ ನಟರಾಜ ರಾಯರ ಪುತ್ರ)ಹಾಗೂ ಅಮೃತಾ ದಂಪತಿಗಳಿಗೆ ತಾ.05.10.2019 ರಂದು ಗಂಡುಮಗುವಿನ ಜನನವಾಗಿರುತ್ತದೆ

### ನಾಮಕರಣ ಸಮಾರಂಭ

ಪ್ರಮೋದ್ ಆಟೋಮೊಬೈಲ್ಸ್‌ನ, ಹರ್ಷಕುಮಾರ್ ಕೇದಿಗೆ ಮತ್ತು ಶ್ರೀಮತಿ ಕನಕವಲ್ಲಿ ಯವರ ಪುತ್ರಿ ಶ್ರೀಮತಿ ಪ್ರೀತಿಕ ಮತ್ತು ಶ್ರೀ ಅಭಿಷೇಕ್ (ಅಲೆವೂರು ಕೃಷ್ಣ ರಾವ್ ಮತ್ತು ಶ್ರೀಮತಿ ಹೇಮಾರವರ ಪುತ್ರ) ರವರ ಮಗುವಿನ ಸಾಕೇತ ಎಂಬ ಹೆಸರಿನ ನಾಮಕರಣೋತ್ಸವವನ್ನು ಬಿ.ಸಿ ರೋಡ್‌ನಲ್ಲಿರುವ ಹರ್ಷ ಫಾರ್ಮ್ಸ್‌ನ ಕನಕಶ್ರೀ ನಿವಾಸದಲ್ಲಿ ದಿನಾಂಕ 18.08.2019 ರಂದು ನೆರವೇರಿಸಲಾಯಿತು.




ಕೂಡ್ಲು ವಿಷ್ಣುಮಂಗಲ ಶ್ರೀ ಮಹಾವಿಷ್ಣು ದೇವಸ್ಥಾನದಲ್ಲಿ ವರ್ಷಾವಧಿಯಂತೆ ನವರಾತ್ರಿ ಸಂದರ್ಭದಲ್ಲಿ ಕದಿರು ತುಂಬಿಸುವ ಕಾರ್ಯಕ್ರಮವನ್ನು ಅರ್ಚಕ ಪ್ರಸನ್ನ ಶ್ಯಾನುಭಾಗ್ ನಡೆಸಿದರು.


**ದೇವಿಕೃಪಾ ಏಜೆನ್ಸೀಸ್, ನಂದಿಕೂರು**

ಫೋನ್ : 2556536 (R), 2555466 (O), Mobile : 9845149521

**ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.**

ಪ್ರೊ। ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು


## ನಿಧನ

### ಛಾಯಾಗ್ರಾಹಕ ಕೆ.ಶ್ರೀನಿವಾಸ ರಾವ್



ಭಾರತ ಸರಕಾರ ಮಾಹಿತಿ ಮತ್ತು ಪ್ರಸಾರ ಮಂತ್ರಾಲಯದಲ್ಲಿ ಛಾಯಾಗ್ರಾಹಕರಾಗಿ ಸೇವೆ ಸಲ್ಲಿಸಿದ್ದ, ದೆಹಲಿಯ ಹಿರಿಯ ಕನ್ನಡಿಗ ಕೆ. ಶ್ರೀನಿವಾಸ ರಾವ್ (76) ದಿ.28.9.2019 ರಂದು ನಿಧನರಾಗಿದ್ದಾರೆ. ಕಳೆದ 56 ವರ್ಷಗಳಿಂದ ದೆಹಲಿಯಲ್ಲಿ ನೆಲೆಸಿದ್ದ ಇವರು ಮೂಲತಃ ಕರ್ನಾಟಕದ ಚಾರ್ಮಾಡಿಯವರು.ಅವರು ಪುಣೆಯಲ್ಲಿ ವಿಶೇಷ ತರಬೇತಿ ಪಡೆದಿದ್ದರು. ಸ್ವಾತಂತ್ರ್ಯ ದಿನದಂದು ಇಂಡಿಯಾ ಗೇಟ್ ತುದಿಯೇರಿ ತೆಗೆದ ಚಿತ್ರಗಳೂ ಸೇರಿದಂತೆ ಸರಕಾರದ ಕಾರ್ಯಕ್ರಮಗಳ ಮಹತ್ವದ ಚಿತ್ರಗಳನ್ನು ಅವರು ಸೆರೆ ಹಿಡಿದಿದ್ದರು. ದೆಹಲಿಯ ಕನ್ನಡ ಭಾರತಿ ರಂಗ ಚಟುವಟಿಕೆಯಲ್ಲಿ ಕೆಲಕಾಲ ತೊಡಗಿಸಿಕೊಂಡಿದ್ದರು. ಪತ್ನಿ, ಪುತ್ರ, ಪುತ್ರಿ ಮತ್ತು ಕೇಂದ್ರ ಸಚಿವಾಲಯ ಗ್ರಂಥಾಲಯದಲ್ಲಿ ಹಿರಿಯ ಅಧಿಕಾರಿಯಾಗಿರುವ ಅಳಿಯ ಡಾ.ಅವನೀಂದ್ರನಾಥ್ ರಾವ್ ಸೇರಿದಂತೆ ಅನೇಕ ಬಂಧು ಮಿತ್ರರನ್ನು ಅವರು ಅಗಲಿದ್ದಾರೆ.

**** ****

### ಶ್ರೀಮತಿ ವಿಶಾಲಾಕ್ಷಿ ಅಮ್ಮ



ಹೊಸ್ಕೋಟೆ ದಿ। ಸುಬ್ಬರಾವ್ ರವರ ಧರ್ಮಪತ್ನಿ ಶ್ರೀಮತಿ ವಿಶಾಲಾಕ್ಷಿ ಅಮ್ಮ ತಾ.05.09.2019 ರಂದು ತಮ್ಮ 85ನೇ ವಯಸ್ಸಿನಲ್ಲಿ ನಿಧನ ಹೊಂದಿದರು ಇವರು ಇಬ್ಬರು ಪುತ್ರರು ಇಬ್ಬರು ಪುತ್ರಿಯರು ಮತ್ತು ಮೊಮ್ಮಕ್ಕಳು, ಮರಿಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ.

**** ****

### ಶ್ರೀಮತಿ ಶೋಭಾರಾವ್

ಬ್ರಹ್ಮಾವರ ಬೈಕಾಡಿ ಸೂರ್ಯನಾರಾಯಣರಾಯರ ಪತ್ನಿ ಶ್ರೀಮತಿ ಶೋಭಾರಾವ್ ರವರು ತಾ25-09-2019 ರಂದು ನಿಧನ ಹೊಂದಿದರು ಇವರು ಬ್ರಹ್ಮಾವರದ ಖ್ಯಾತ ವೈದ್ಯ ಡಾ।ಅನಿಲ್ ಕುಮಾರ್ ಹಾಗೂ ಪತಿ, ಪುತ್ರಿ ಹಾಗೂ ಬಂಧುಬಾಂಧವರನ್ನು ಅಗಲಿರುತ್ತಾರೆ.

**** ****

### ಶ್ರೀಮತಿ ರೇವತಿ ಅಣ್ಣಾಜಿ ರಾವ್



ಮಂಗಳೂರು ಕೆಪಿಟಿ ಬಳಿಯ ವಿಶ್ವಾಸ್ ಸಾಮ್ರಾಟ್ ಅಪಾರ್ಟ್‌ಮೆಂಟಿನ ನಿವಾಸಿ ಶ್ರೀಮತಿ ರೇವತಿ ಅಣ್ಣಾಜಿ ರಾವ್ 15-09-2019ರಂದು ನಿಧನ ಹೊಂದಿದರು. ಇವರು ದಿವಂಗತ ಅಣ್ಣಾಜಿ ರಾವ್ ರ ಪತ್ನಿ. ಇವರ ದೇಹವನ್ನು ಅವರ ಇಚ್ಛೆಯಂತೆ ವೈದ್ಯಕೀಯ ವಿದ್ಯಾರ್ಥಿಗಳ ಕಲಿಕೆಗಾಗಿ ಮಂಗಳೂರಿನ ಎ.ಜೆ ವೈದ್ಯಕೀಯ ಮಹಾವಿದ್ಯಾಲಯಕ್ಕೆ ದಾನಮಾಡಲಾಯಿತು. ಅವರ ಪತಿಯವರೂ ಏಳು ವರ್ಷಗಳ ಹಿಂದೆ ಇದೇ ರೀತಿ ತಮ್ಮ ನಿಧನಾನಂತರ ದೇಹವನ್ನು ವೈದ್ಯಕೀಯ ವಿದ್ಯಾರ್ಥಿಗಳ ಕಲಿಕೆಗಾಗಿ ದಾನಮಾಡಲು ಇಚ್ಛೆ ವ್ಯಕ್ತಪಡಿಸಿದ್ದು ಅವರ ದೇಹವನ್ನೂ ಇದೇ ರೀತಿ ದಾನಮಾಡಲಾಗಿತ್ತು. ಪತಿ ಪತ್ನಿಯರಿಬ್ಬರ ಆದರ್ಶವು ಎಲ್ಲರಿಗೂ ಮಾದರಿಯಾಗಿದೆ. ಇವರು ಮಕ್ಕಳಾದ ಕಿರಣ್ ಕುಮಾರ್ ಶ್ರೀಮತಿ ಪೂರ್ಣಿಮಾ ಶಾಸ್ತ್ರಿ ಹಾಗೂ ಬಂಧು ಬಾಂಧವರನ್ನು ಅಗಲಿದ್ದಾರೆ.

## ಶ್ರೀಧರ ಹೆಬ್ಬಾರ್‌ರಿಗೆ ಕಾಳಿಂಗ ನಾವುಡ ಪ್ರಶಸ್ತಿ



ಕಲಾ ಕದಂಬ ಆರ್ಟ್ ಸೆಂಟರ್ ಬೆಂಗಳೂರು ಇವರ ಸಂಯೋಜನೆಯಲ್ಲಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಕಾರದೊಂದಿಗೆ ಈ ವರ್ಷದ ಕಾಳಿಂಗ ನಾವುಡಪ್ರಶಸ್ತಿ-2019 ನ್ನು ಶ್ರೀಯುತ ಎಂ. ಶ್ರೀಧರ ಹೆಬ್ಬಾರ್ ಇವರಿಗೆ, ಸಚಿವ ಕೋಟ ಶ್ರೀನಿವಾಸ ಪೂಜಾರಿ ಹಾಗೂ ಇನ್ನಿತರರು ಬೆಂಗಳೂರಿನ ಚಾಮರಾಜ ಪೇಟೆಯ ಕಲಾ ಸಭಾದ ಸಮಾರಂಭದಲ್ಲಿ ನೀಡಿ ಗೌರವಿಸಿದರು. ಶ್ರೀಧರ ಹೆಬ್ಬಾರರು ಬಾರಕೂರು ಮಾಸ್ಕಿಬೈಲು ದಿ.ಗೋವಿಂದ ರಾವ್ ಮತ್ತು ದಿ. ಶ್ರೀದೇವಿ ಅಮ್ಮನವರ ಸುಪುತ್ರರಾಗಿದ್ದು ಬಡಗು ಹಾಗೂ ತೆಂಕುತಿಟ್ಟಿನ ಸುಪ್ರಸಿದ್ಧ ಭಾಗವತರು ಮತ್ತು ಯಕ್ಷ ಗುರುಗಳಾಗಿದ್ದಾರೆ.

## ಶ್ರೀ. ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು

### ಪ್ರಕಟಣೆ

ದಾನಿಗಳೊಬ್ಬರು ನಮ್ಮ ಸಮಾಜದ ಬಡ ಕುಟುಂಬದಿಂದ ಬರುವ ಹಾಗೂ ತಾಂತ್ರಿಕ ವಿದ್ಯಾಭ್ಯಾಸವನ್ನು ಮಾಡುತ್ತಿರುವ ಇಬ್ಬರು ವಿದ್ಯಾರ್ಥಿಗಳಿಗೆ ಲ್ಯಾಪ್ ಟಾಪ್ (Laptop) ಕೊಡ ಬಯಸಿದ್ದಾರೆ. ತಮ್ಮ ವಿದ್ಯಾಭ್ಯಾಸಕ್ಕೆ ಲ್ಯಾಪ್ ಟಾಪ್ ಅಗತ್ಯವಿರುವ ವಿದ್ಯಾರ್ಥಿಗಳು ಬಿಳಿ ಕಾಗದದಲ್ಲಿ ಶ್ರೀ ಸಭೆಗೆ ಅರ್ಜಿಯನ್ನು ದಿನಾಂಕ 30.10.2019 ರ ಒಳಗೆ ತಲುಪುವಂತೆ ಸಲ್ಲಿಸತಕ್ಕದ್ದು. ಅರ್ಜಿಗೆ ಹಿಂದಿನ ಸೆಮಿಸ್ಟರ್ ನ ಅಂಕಪಟ್ಟಿಯ ಪ್ರತಿ ಹಾಗೂ ಕಲಿಕಾ ಪ್ರಮಾಣ ಪತ್ರದ ಪ್ರತಿಯನ್ನು ಲಗತ್ತೀಕರಿಸಬೇಕು.

-ಶ್ರೀ. ಕರುಣ್‌ರಾವ್ ಬೆಳ್ಳೆ, (ಕಾರ್ಯದರ್ಶಿ)

## ಬಣ್ಣದ ಸಕ್ಕಟ್ಟು ಶ್ರೀ ಲಕ್ಷ್ಮೀನಾರಾಯಣ (ರಿ) ಸೌಕೂರು

### ಪ್ರಕಟಣೆ

ಬಣ್ಣದ ಸಕ್ಕಟ್ಟು ಶ್ರೀ ಲಕ್ಷ್ಮೀನಾರಾಯಣ (ರಿ) ಸೌಕೂರು ಇದರ ವತಿಯಿಂದ ತಾ.10.11.2019 ಭಾನುವಾರ ಸೌಕೂರು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದಲ್ಲಿ ಬೆಳಿಗ್ಗೆ 10 ಗಂಟೆಗೆ ದಶಮಾನೋತ್ಸವ ಸಮಾರಂಭ ನೆರವೇರಲಿದೆ ಹಾಗೂ "ಬಣ್ಣದ ಸಕ್ಕಟ್ಟು ರಾಜಋಷಿ ರವೀಂದ್ರ ಪ್ರಶಸ್ತಿ" ಪ್ರದಾನ ನಡೆಯಲಿದೆ. ಎಲ್ಲರಿಗೂ ಆದರದ ಸ್ವಾಗತ. -ಟ್ರಸ್ಟಿಗಳು


ನವರಾತ್ರಿ ಸಾಂಸ್ಕೃತಿಕ ಕಾರ್ಯಕ್ರಮದ ಉದ್ಘಾಟನೆ ಡಾ। ವೈ. ರವೀಂದ್ರನಾಥ್ ರಾವ್‌ರಿಂದ


ಮ.ನಾ.ಹೆಬ್ಬಾರರ ಹರಿಕಥೆ–ಸತ್ಯಹರಿಶ್ಚಂದ್ರ


ಮ.ನಾ ಹೆಬ್ಬಾರ್ ಹಾಗೂ ಸಂಗಡಿಗರಿಂದ ತಾಳಮದ್ದಳೆ–ಕರ್ಣವಸಾನ


ಶ್ರೀ ಶಾರದಾ ಭಜನಾ ಮಂಡಳಿಯಿಂದ ಭಜನೆ


ಡಾ. ವಿದ್ಯಾ ಎಸ್.ರಾವ್ ಹಾಗೂ ಮಾನಸಾರವರಿಂದ ಸಂಗೀತ ಕಾರ್ಯಕ್ರಮ


ಹೂವಿನ ಕೋಲು–ಜಾನಪದ ಕಾರ್ಯಕ್ರಮ


ಮಹಿಳಾ ಸದಸ್ಯೆಯರಿಂದ ನೃತ್ಯ


ಮಹಿಳಾ ಸದಸ್ಯೆಯರ ಕೋಲಾಟ


ಯಕ್ಷಗಾನದ ಫೋಟೋ


ಕುಮಾರಿ ಪ್ರೇರಣಾರವರಿಂದ ನೃತ್ಯ


ವಿದುಷಿ ಡಾ। ಭಾಗ್ಯಶ್ರೀ ಪಡುಬಿದ್ರೆಯವರಿಂದ ಭರತನಾಟ್ಯ


ಶ್ರಾವ್ಯಾ ರಾವ್‌ರವರಿಂದ ಸಂಗೀತ ಕಾರ್ಯಕ್ರಮ


**With Best Compliments From :**




## ಶ್ರೀ ಶಾರದಾ ಮಂಟಪದಲ್ಲೊಂದು ಅಪರೂಪದ ಕಾರ್ಯಕ್ರಮ



ಉಡುಪಿಯ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ(ರಿ.) ಕುಂಜಿಬೆಟ್ಟು ಇವರು ಪೆರ್ಡೂರು ಮತ್ತು ಕಟಪಾಡಿಯ ರೋಟರಿ ಕ್ಲಬ್‌ಗಳ ಸಹಯೋಗದೊಂದಿಗೆ ತಾ.14-09-2019ರ ಶನಿವಾರದಂದು ವಿಶಿಷ್ಟ ಸನ್ಮಾನ ಕಾರ್ಯಕ್ರಮವನ್ನು ನೆರವೇರಿಸಿದರು. ಉಡುಪಿಯ ವೈಕುಂಠ ಬಾಳಿಗಾ ಕಾನೂನು ಕಾಲೇಜಿನ ಉಪನ್ಯಾಸಕಿ ಡಾ। ನಿರ್ಮಲಾ ಹರಿಕೃಷ್ಣ, ಪೂರ್ಣಪ್ರಜ್ಞಾ ಕಾಲೇಜಿನ ಉಪನ್ಯಾಸಕಿ ಕು। ಪ್ರಜ್ಞಾ ಮಾರ್ಪಳ್ಳಿ, ಎಮ್.ಜಿ.ಎಮ್ ಕಾಲೇಜಿನ ಉಪನ್ಯಾಸಕಿ ಶ್ರೀಮತಿ ಕಾತ್ಯಾಯಿನಿ ಕುಂಜಿಬೆಟ್ಟು, ಸರಕಾರಿ ಪ ಪೂ ಕಾಲೇಜಿನ ಉಪನ್ಯಾಸಕಿ ಶ್ರೀಮತಿ ಸವಿತಾ ಎರ್ಮಾಳ್, ಡಾ। ಟಿ.ಎಮ್.ಎ.ಪೈ ಬಿ.ಎಡ್ ಕಾಲೇಜಿನ ಉಪನ್ಯಾಸಕಿ ಶ್ರೀಮತಿ ಪ್ರೀತಿ ಎಸ್ ರಾವ್, ಉದ್ಯಾವರದ ಹಿಂದೂ ಹಿರಿಯ ಪ್ರಾಥಮಿಕ ಶಾಲಾ ನಿವೃತ್ತ ಶಿಕ್ಷಕ ಶ್ರೀ ಕೃಷ್ಣ ಕುಮಾರ್ ರಾವ್ ಮಟ್ಟು, ಉದ್ಯಾವರದ ಸೈಂಟ್ ಕ್ಸೇವಿಯರ್ ಪ್ರೌಢ ಶಾಲಾ ಶಿಕ್ಷಕ ಶ್ರೀ ಶ್ರೀನಿವಾಸ ರಾವ್, ಅಲೆವೂರಿನ ನೆಹರೂ ಪ್ರೌಢ ಶಾಲೆಯ ನಿವೃತ್ತ ಶಿಕ್ಷಕ ಶ್ರೀ ಅಪ್ಪು ಪೂಜಾರಿ, ಮಣಿಪಾಲ ಮಾಹೆಯ ಲೈಫ್ ಸೈನ್ಸ್ ವಿಭಾಗದ ಮುಖ್ಯಸ್ಥರಾದ ಡಾ। ಸತೀಶ್ ರಾವ್, ಬ್ರಹ್ಮಾವರದ ಸರಕಾರಿ ಪ.ಪೂ.ಕಾಲೇಜಿನ ಚಿತ್ರಕಲಾ ಶಿಕ್ಷಕರಾದ ಶ್ರೀ ದಿನಮಣಿ ಶಾಸ್ತ್ರೀ, ಮಣಿಪಾಲ ಪ.ಪೂ.ಕಾಲೇಜಿನ ಉಪನ್ಯಾಸಕ ಶ್ರೀ ನಾಗೇಂದ್ರ ಪೈ ಮೊದಲಾದ ಸಾಧಕ ಶಿಕ್ಷಕ ಬಾಂಧವರನ್ನು ಹಾಗೂ ವೃತ್ತಿ ನಿರತರಾದ ಪೋಟೋ ಫ್ರೇಂ ನಿರ್ವಾಹಕರಾದ ಶ್ರೀ ಶೇಷಗಿರಿ ಕುಡ್ವ, ಉಡುಪಿಯ ವಿಶಾಲ್ ಟೂರಿಸ್ಟ್‌ನ ಶ್ರೀ ಭಾಸ್ಕರ್, ರಾಮನ್ ಲ್ಯಾಬ್ ಇಕ್ಯುಪ್‌ಮೆಂಟ್‌ನ ಶ್ರೀ ಪದ್ಮಾನಂದ ರಾವ್, ನಿವೃತ್ತ ಸೇನಾ ಶಿಕ್ಷಕಿ ಶ್ರೀಮತಿ ತುಳಸೀ ದೇವಾಡಿಗ, ಬಹುಮುಖ ಪ್ರತಿಭೆಯ ಶ್ರೀ ಕಟಪಾಡಿ ಶಂಕರ ಪೂಜಾರಿ ಮೊದಲಾದವರನ್ನು ಶಾಲು, ಹಾರ, ಫಲ, ಪುಷ್ಪ, ಸ್ಮರಣಿಕೆ ಮತ್ತು ಸನ್ಮಾನಪತ್ರದೊಂದಿಗೆ ಅಭಿನಂದಿಸಲಾಯಿತು. ವೇದಿಕೆಯಲ್ಲಿ ಕಟಪಾಡಿ ರೋಟರಿ ಕ್ಲಬ್‌ನ ಅಧ್ಯಕ್ಷರಾದ ರೋ। ಉಮೇಶ್ ರಾವ್, ಪೆರ್ಡೂರು ರೋಟರಿ ಕ್ಲಬ್‌ನ ಅಧ್ಯಕ್ಷರಾದ ರೋ। ಪ್ರಭಾಕರ ಭಂಡಿ, ಉಡುಪಿಯ ಸ್ಥಾನಿಕ ಬ್ರಾಹ್ಮಣ ಸಂಘದ ಅಧ್ಯಕ್ಷ ಶ್ರೀ ಮಂಜುನಾಥ ಹೆಬ್ಬಾರ್, ಹಾಗೂ ರೋಟರಿ ಜಿಲ್ಲಾ ಅಸಿಸ್ಟಂಟ್ ಗವರ್ನರ್ ರೋ। ಸೇಸಪ್ಪ ಎ ರೈ ಉಪಸ್ಥಿತರಿದ್ದರು.









## ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘದ ವಾರ್ಷಿಕ ಮಹಾಸಭೆ



ತಾ15-09-2019ರ ರವಿವಾರ ಶ್ರೀ ಶಾರದಾ ಮಂಟಪದಲ್ಲಿ ಸಂಘದ ವಾರ್ಷಿಕ ಮಹಾಸಭೆಯು ಜರಗಿತು. ಪ್ರಸಕ್ತ ಆಡಳಿತ ಮಂಡಳಿಯ ಮೊದಲ ಮಹಾಸಭೆ ಇದಾಗಿದೆ. ಶ್ರೀಮತಿ ಜಯಲಕ್ಷ್ಮಿ ಮುರಳೀಧರ ರಾವ್‌ರವರ ಪ್ರಾರ್ಥನೆಯೊಂದಿಗೆ ಸಭಾ ಕಾರ್ಯಕ್ರಮ ಆರಂಭವಾಯಿತು. ಸಂಘದ ಅಧ್ಯಕ್ಷರಾದ ಶ್ರೀ ಮಂಜುನಾಥ ಹೆಬ್ಬಾರ್‌ರವರು ಸಭಾಸದರನ್ನು ಸ್ವಾಗತಿಸಿದರು. ಕಾರ್ಯದರ್ಶಿಗಳಾದ ಶ್ರೀ ಯು. ಅರವಿಂದ ಕುಮಾರ್‌ರವರು ಮಹಾಸಭೆಯ ನೋಟೀಸಿನ ಅಂಗೀಕಾರ ಹಾಗೂ ಹಿಂದಿನ ಮಹಾಸಭೆಯ ವರದಿ ಮಂಡಿಸಿ ಸರ್ವಾನುಮತದ ಅಂಗೀಕಾರ ಪಡೆದರು ಮತ್ತು ಕಾರ್ಯದರ್ಶಿಗಳು ಗತ ವರ್ಷದ ಚಟುವಟಿಕೆಗಳ ವರದಿಯನ್ನು ಮಂಡಿಸಿ ಅಂಗೀಕಾರ ಪಡೆದರು. ಕೋಶಾಧಿಕಾರಿಗಳಾದ ಶ್ರೀ ಜಯರಾಮ ರಾಯರು 2018-2019ರ ಸಾಲಿನ ಲೆಕ್ಕ ಪತ್ರ, 2019-20ನೇ ಸಾಲಿನ ಅಂದಾಜು ಆಯವ್ಯಯ ಪಟ್ಟಿಯನ್ನು ಮಂಡಿಸಿ ಅಂಗೀಕಾರ ಪಡೆದರು. ಸದಸ್ಯರ ಪ್ರಶ್ನೆಗಳಿಗೆ ಸಮಾಧಾನಕರವಾದ ಉತ್ತರಗಳನ್ನು ನೀಡಲಾಯಿತು. ಭೋಜನ ಶಾಲೆಯ ಮಾಡಿನ ನವೀಕರಣದ ಬಗ್ಗೆ ಚರ್ಚೆ ನಡೆದು ನವೀಕರಣಕ್ಕೆ ಅನುಮತಿಯನ್ನು ಪಡೆಯಲಾಯಿತು ಅಧ್ಯಕ್ಷರು ಈ ವರ್ಷದಲ್ಲಿ ಸದಸ್ಯರು ತಮಗೆ ಇತ್ತಿದ್ದ ಸಹಕಾರಕ್ಕೆ ಕೃತಜ್ಞತೆಯನ್ನು ವ್ಯಕ್ತಪಡಿಸಿದರು. ಶ್ರೀ ಪ್ರಭಾಕರ ಭಂಡಿಯವರು ಧನ್ಯವಾದವಿತ್ತರು.

## ವಿಜಯದಶಮಿಯಂದು ಶ್ರೀ ಶಾರದಾ ಮಂಟಪದಲ್ಲಿ ಯಕ್ಷಗಾನ






ವಿಜಯದಶಮಿಯಂದು ಶ್ರೀಶಾರದಾ ಹವ್ಯಾಸಿ ಯಕ್ಷಗಾನ ಕಲಾವಿದರಿಂದ ಶ್ರೀ ಶಾರದಾ ಮಂಟಪ ಕುಂಜಿಬೆಟ್ಟು ಉಡುಪಿ ಇಲ್ಲಿ ಮಕ್ಕಳ ಯಕ್ಷಗಾನ ''ಮೈಂದ-ದ್ವಿವಿದ'' ಹಾಗೂ ಹಿರಿಯ ಕಲಾವಿದರಿಂದ ''ಮಹಾಮಂತ್ರಿ ದುಷ್ಟಬುದ್ಧಿ'' ಜರಗಿತು.






Owned, Published & Edited by : Sri Y. Muralikrishna Rao onbehalf of Sri Sthanika Dravida Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 0820-2520754
Designed & Printed @ SriNidhi Computer Graphics, Rajataadri, Manipal. E-mail : srisharadaudupi@gmail.com Website : www.srisharada.org